ನಿಮ್ಮೂರು ಸುದ್ದಿ

ಕನ್ನಡ ದಿನ ಪತ್ರಿಕೆ NIMMURU SUDDI

ಏಕ ಕಾಲಕ್ಕೆ ಬಳ್ಳಾರಿ, ಕೊಪ್ಪಳ, ಯಾದಗಿರಿ, ರಾಯಚೂರು, ಕಲಬುರ್ಗಿ, ಬೀದರ, ವಿಜಯನಗರ ಜಿಲ್ಲೆಗಳಲ್ಲಿ ಪ್ರಕಟ

ಸಂಪಾದಕರು: ಸುಂದರ್ Editor : Sundar

Volume: 01, Issue: 259 RNI Number : KNKAN/25/A2770 02-10-2026 Friday Page 04, Price 2/- suddinimmuru@gmail.com Mob:-8660146563

ಸಂಪುಟ :01 ಸಂಚಿಕೆ :259 ರಾಯಚೂರು 02-10-2026 ಶುಕ್ರವಾರ ಪುಟ 04 ಬೆಲೆ ರೂ.2/- ಮೊ:8660146563

ಕ್ರಿಮಿನಲ್ ಪ್ರಕರಣ ದಾಖಲಿಸಲು ಆಗ್ರಹ: ಸಿಎಂ



ಬೆಂಗಳೂರು, ಅ.1– ವಿಶೇಷ ಮತದಾರರ ಪಟ್ಟಿ ಪರಿಷ್ಕರಣೆ ಪ್ರಕ್ರಿಯೆಯಲ್ಲಿ ಆಗಿರುವ ಅಕ್ರಮದ ಬಗ್ಗೆ ರಾಜ್ಯ ಚುನಾವಣಾ ಆಯೋಗ ಕ್ರಿಮಿನಲ್ ಪ್ರಕರಣ ದಾಖಲಿಸಿ ತನಿಖೆಗೆ ಆದೇಶಿಸಬೇಕು ಎಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಒತ್ತಾಯಿಸಿದರು.

ಮುಖ್ಯಮಂತ್ರಿಗಳ ಗೃಹ ಕಚೇರಿಯಲ್ಲಿ ಕೃಷ್ಣಾದಲ್ಲಿಂದು ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅರ್ಹ ಮತದಾರರನ್ನು ಮತದಾರರ ಪಟ್ಟಿಯಿಂದ ಹೊರಗಿಡುವ ಅಕ್ರಮಗಳು ನಡೆದಿವೆ. ಫಾರಂ ನಂ. 7 ಅನ್ನು ಬೇರೆಡೆಯಿಂದ ಮುದ್ರಿಸಿ ತಂದು ಇಲ್ಲಿ ಬಿಎಲ್‌ಒಗಳಿಗೆ ಸಲ್ಲಿಸಿ ಅರ್ಹ ಮತದಾರರನ್ನು ಮತಪಟ್ಟಿಯಿಂದ ಹೊರಗಿಡುವ ಷಡ್ಯಂತ್ರ ನಡೆದಿದೆ. ಈ ಬಗ್ಗೆ ಕ್ರಿಮಿನಲ್ ಪ್ರಕರಣವನ್ನು ಚುನಾವಣಾ ಆಯೋಗ ದಾಖಲಿಸಬೇಕು ಎಂದು ಆಗ್ರಹಿಸಿದರು.

ಫಾರಂ ನಂ. 7 ಬಿಜೆಪಿ ಮತ್ತು ಜೆಡಿಎಸ್ ಕಾರ್ಯಕರ್ತರಿಗೆ ನೂರಾರು ಸಂಖ್ಯೆಯಲ್ಲಿ ನೀಡಲಾಗಿದೆ. ಕೊನೆಯ 3 ದಿನ ಇರುವಾಗ ಫಾರಂ ನಂ 7 ಸಲ್ಲಿಕೆಯಾಗಿದೆ. ಇವರಿಗೆ ಇದು ಹೇಗೆ ಸಿಕ್ಕಿತು. ಅಂಕಿ ಅಂಶಗಳನ್ನು ಕೊಟ್ಟವರು ಯಾರು, ಎಲ್ಲದರ ಬಗ್ಗೆಯೂ ತನಿಖೆಯಾಗಬೇಕು. ಚುನಾವಣಾ ಆಯೋಗ ಕ್ರಿಮಿನಲ್ ಪ್ರಕರಣ ದಾಖಲಿಸಬೇಕು ಎಂದು ಒತ್ತಾಯಿಸಿದರು.

ರಾಜ್ಯದ ಮುಖ್ಯಮಂತ್ರಿಯಾಗಿ ಅರ್ಹ ಮತದಾರರನ್ನು ರಕ್ಷಿಸುವುದು ನನ್ನ ಕರ್ತವ್ಯ. ರಾಜ್ಯ ಸರ್ಕಾರವೂ ಎಸ್‌ಐಆರ್‌ನಲ್ಲಿ ನಡೆದಿರುವ ಅಕ್ರಮದ ಬಗ್ಗೆ ಪೊಲೀಸರಿಂದ ತನಿಖೆ ಮಾಡಿಸುತ್ತದೆ. ಜತೆಗೆ ಚುನಾವಣಾ ಆಯೋಗವೂ ಕ್ರಿಮಿನಲ್ ಪ್ರಕರಣವನ್ನು ದಾಖಲಿಸಿ ತನಿಖೆಗೆ ಆದೇಶಿಸಬೇಕು ಎಂದು ಅವರು ಆಗ್ರಹಿಸಿದರು.

ಸುದ್ದಿಗೋಷ್ಠಿಯ ನಂತರ ರಾಜ್ಯ ಚುನಾವಣಾ ಮುಖ್ಯ ಆಯುಕ್ತರನ್ನು ಭೇಟಿ ಮಾಡಿ ನಾನು ದೂರು ನೀಡುತ್ತಿದ್ದೇನೆ. ಅವರು ನನ್ನ ದೂರನ್ನು ಸ್ವೀಕರಿಸಿ ಎಸ್‌ಐಆರ್ ಅಕ್ರಮದಲ್ಲಿ ನಡೆದಿರುವ ಕ್ರಿಮಿನಲ್ ಷಡ್ಯಂತ್ರದ ಬಗ್ಗೆ ತನಿಖೆಗೆ ಆದೇಶಿಸುವವರೆಗೂ ಅಲ್ಲಿಂದ ಕದಲುವುದಿಲ್ಲ ಎಂದು ಅವರು ಹೇಳಿದರು.

ಇಂದು ಮಧ್ಯಾಹ್ನ ಸಚಿವ ಸಂಪುಟ ಸಭೆ ಇದೆ. ಅದು ನನಗೆ ಮುಖ್ಯವಲ್ಲ. ರಾಜ್ಯದ ಅರ್ಹ ಮತದಾರರನ್ನು ರಕ್ಷಿಸುವುದು ನನ್ನ ಕರ್ತವ್ಯ. ಹಾಗಾಗಿ ನಾನು ಸಚಿವ ಸಂಪುಟ ಸಭೆ ಇದ್ದರೂ ರಾಜ್ಯದ ಮುಖ್ಯ ಚುನಾವಣಾ ಆಯುಕ್ತರನ್ನು ಭೇಟಿ ಮಾಡಿ ಅಕ್ರಮ ನಡೆಸಿರುವವರ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸುವವರೆಗೂ ಅಲ್ಲಿಂದ ಬರಲ್ಲ. ನನ್ನ ಜತೆ ಸಚಿವ ಸಂಪುಟದ ಸಹದ್ಯೋಗಿಗಳು ಇರುತ್ತಾರೆ ಎಂದು ಹೇಳಿದರು.

ಅರ್ಹ ಮತದಾರರನ್ನು ಮತಪಟ್ಟಿಯಿಂದ ಹೊರಗಿಡುವುದಕ್ಕೆ ಅವಕಾಶ ಕೊಡಲ್ಲ. ನಾನು ಕಾನೂನು ಸಲಹೆಯನ್ನು ಪಡೆದುಕೊಳ್ಳುತ್ತೇನೆ. ರಾಜ್ಯ ಸರ್ಕಾರದಿಂದಲೂ ತನಿಖೆ ನಡೆಸುತ್ತೇವೆ. ರಾಜ್ಯದಲ್ಲಿ ಎಸ್‌ಐಆರ್ ಪರಿಷ್ಕರಣೆಯಲ್ಲಿ ದೊಡ್ಡ ಮಟ್ಟದ ಪಿತೂರಿ ನಡೆದಿದೆ ಎಂದು ದೂರಿದರು.

ರಾಜ್ಯದಿಂದಲೇ ಮತಗಳ್ಳತನದ ವಿರುದ್ಧ ಹೋರಾಟ ಆರಂಭವಾಯಿತು. ಈಗ ಅದು ದೇಶವ್ಯಾಪಿ ಆಂದೋಲನವಾಗಿ ನಡೆಯುತ್ತಿದೆ. ಎಸ್‌ಐಆರ್ ಪ್ರಾರಂಭವಾದ ಮೇಲೆ ಸರ್ಕಾರದಿಂದ ಚುನಾವಣಾ ಆಯೋ

3ನೇಯ ಪುಟಕ್ಕೆ

ಅನ್ನದ ಕಣಕಣವೂ ಅಮೂಲ್ಯ: ಆಹಾರ ನಷ್ಟ-ವ್ಯರ್ಥಕ್ಕೆ ಕಡಿವಾಣ ಹಾಕುವುದು ಕೃಷಿ ತಾಂತ್ರಿಕ ವಿಜ್ಞಾನಿಗಳ ಜವಾಬ್ದಾರಿ - ಡಾ. ಕೆ. ವಿ. ಪ್ರಕಾಶ್



ರಾಯಚೂರು,ಆ.01–

ಭಾರತದಲ್ಲಿ ಆಹಾರ ನಷ್ಟ ಮತ್ತು ವ್ಯರ್ಥವು ಗಂಭೀರ ಸವಾಲಾಗಿದ್ದು, ಅನ್ನದ ಪ್ರತಿಯೊಂದು ಕಣವೂ ಅಮೂಲ್ಯವಾಗಿರುವುದರಿಂದ ಹೊಲದಿಂದ ಊಟದ ಮೇಜಿನವರೆಗೆ ಆಹಾರ ನಷ್ಟವನ್ನು ಕಡಿಮೆ ಮಾಡಿ, ಆಹಾರ ವ್ಯರ್ಥವನ್ನು ತಡೆದು, ರೈತನ ಶ್ರಮಕ್ಕೆ ಗೌರವ ನೀಡುತ್ತಾ ಆಹಾರವನ್ನು ಉಳಿಸಿ, ಸುಸ್ಥಿರ ಭವಿಷ್ಯವನ್ನು ನಿರ್ಮಿಸುವುದು ನಮ್ಮೆಲ್ಲರ ಮತ್ತು ಕೃಷಿ ತಾಂತ್ರಿಕ ವಿಜ್ಞಾನಿಗಳ ಜವಾಬ್ದಾರಿಯಾಗಿದೆ ಎಂದು ಕೃಷಿ ತಾಂತ್ರಿಕ ಮಹಾವಿದ್ಯಾಲಯದ ಡೀನ್‌ರಾದ ಡಾ. ಕೆ. ವಿ. ಪ್ರಕಾಶ್ ರವರು ಹೇಳುವ ಮೂಲಕ ''ಆಹಾರ ನಷ್ಟ ಮತ್ತು ವ್ಯರ್ಥ ಕುರಿತು ಅಂತರಾಷ್ಟ್ರೀಯ ಜಾಗೃತಿ ಕಾರ್ಯಕ್ರಮ''ಕ್ಕೆ ಚಾಲನೆ ನೀಡಿದರು.

3ನೇಯ ಪುಟಕ್ಕೆ

ವೈಟಿಪಿಎಸ್ ಭೂಸಂತ್ರಸ್ತರಿಗೆ ಉದ್ಯೋಗ ನೀಡಿ

3 ವರ್ಷ ಭೂಒಡೆತನದ ಷರತ್ತು ಸಡಿಲಿಸಿ ಒನ್ ಪ್ಲಸ್ ಒನ್ ಭರವಸೆಯೂ ಈಡೇರಿಲ್ಲ

ರಾಯಚೂರು: ವೈಟಿಪಿಎಸ್ ಘಟಕ ಸ್ಥಾಪನೆಗಾಗಿ ಭೂಮಿ ಕಳೆದುಕೊಂಡಿರುವ ಕುಟುಂಬಗಳ ಸದಸ್ಯರಿಗೆ ಉದ್ಯೋಗ ನೀಡುವಲ್ಲಿ ವಿಧಿಸಿರುವ ಮೂರು ವರ್ಷಗಳ ಭೂಒಡೆತನದ ಷರತ್ತನ್ನು ಸಡಿಲಿಸಿ, ಅರ್ಹರಿಗೆ ಕೂಡಲೇ ನೇರ ಉದ್ಯೋಗ ಅಥವಾ ತರಬೇತಿ ನೀಡಬೇಕು ಎಂದು ರಾಯಚೂರು ಕೈಗಾರಿಕಾ ಪ್ರದೇಶ ಭೂಸಂತ್ರಸ್ತರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಕೆ. ಸತ್ಯನಾರಾಯಣರಾವ್ ಒತ್ತಾಯಿಸಿದರು.



ನಗರದ ಪತ್ರಿಕಾ ಭವನದಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಏಗನೂರು, ಚಿಕ್ಕಸೂಗೂರು, ಕುಕನೂರು, ಹೆಗ್ಗಸನಹಳ್ಳಿ ಹಾಗೂ ದೇವಸೂಗೂರು ಗ್ರಾಮಗಳ ಸುಮಾರು 1,150 ಎಕರೆ ಕೃಷಿ ಜಮೀನನ್ನು ವೈಟಿಪಿಎಸ್‌ಗಾಗಿ ಸ್ವಾಧೀನಪಡಿಸಿಕೊಳ್ಳಲಾಗಿದೆ. ಭೂಸ್ವಾಧೀನದ ವೇಳೆ ಪ್ರತಿ ಕುಟುಂಬದ ಒಬ್ಬರಿಗೆ ವಿದ್ಯಾರ್ಹತೆಗೆ ಅನುಗುಣವಾಗಿ ಉದ್ಯೋಗ ಅಥವಾ ತರಬೇತಿ ನೀಡುವುದಾಗಿ ಭರವಸೆ ನೀಡಲಾಗಿತ್ತು ಎಂದರು.

2016ರಲ್ಲಿ ಉದ್ಯೋಗಕ್ಕಾಗಿ ಅರ್ಜಿ ಪಡೆದು, ದಾಖಲೆಗಳನ್ನು ಸಲ್ಲಿಸಿದ್ದರೂ 33 ಕುಟುಂಬಗಳ ಸದಸ್ಯರಿಗೆ ಮೂರು ವರ್ಷಗಳ ಭೂಒಡೆತನ ಇಲ್ಲ ಎಂಬ ಕಾರಣ ನೀಡಿ ಸೂಚನಾ ಪತ್ರ ನೀಡಲಾಗಿದೆ. ಹಲವು ವರ್ಷಗಳಿಂದ ಮುಖ್ಯಮಂತ್ರಿ, ಕೆಪಿಸಿಎಲ್ ಆಡಳಿತ ಮಂಡಳಿ ಹಾಗೂ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿದರೂ ಸಮಸ್ಯೆ ಬಗೆಹರಿದಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಒನ್ ಪ್ಲಸ್ ಒನ್ ಆಧಾರದಲ್ಲಿ ಉದ್ಯೋಗ ನೀಡುವುದಾಗಿ ನೀಡಿದ್ದ ಭರವಸೆಯೂ ಈಡೇರಿಲ್ಲ. ವೈಟಿಪಿಎಸ್‌ನಲ್ಲಿ ಭೂಸಂತ್ರಸ್ತರಿಗೆ ಉದ್ಯೋಗ ನೀಡಿದರೆ ಇತರ ಕೈಗಾರಿಕೆಗಳಲ್ಲೂ ಇದೇ ಬೇಡಿಕೆ ಎದುರಾಗುತ್ತದೆ ಎಂಬ ಕಾರಣಕ್ಕೆ ಉದ್ಯೋಗ ನೀಡುವುದನ್ನು ವಿಳಂಬಿಸಲಾಗುತ್ತಿದೆ ಎಂದು ಆರೋಪಿಸಿದರು.

ಭೂಮಿ ಕಳೆದುಕೊಂಡ ರೈತರ ಕುಟುಂಬಗಳು ಹಲವು ವರ್ಷಗಳಿಂದ ಉದ್ಯೋಗಕ್ಕಾಗಿ ಕಾಯುತ್ತಿವೆ. ಸರ್ಕಾರ ಮಾನವೀಯ ದೃಷ್ಟಿಯಿಂದ ಸಮಸ್ಯೆ ಪರಿಗಣಿಸಿ ಭೂಒಡೆತನದ ಷರತ್ತು ಸಡಿಲಿಸಿ ಕೂಡಲೇ ಉದ್ಯೋಗ ಕಲ್ಪಿಸಬೇಕು. ಇಲ್ಲವಾದರೆ ಭೂಸಂತ್ರಸ್ತ ಕುಟುಂಬಗಳ ಸದಸ್ಯರು ರಸ್ತೆಗಿಳಿದು ಧರಣಿ ನಡೆಸಬೇಕಾಗುತ್ತದೆ. ಸಂಘರ್ಷ ಸೃಷ್ಟಿಸುವುದು ನಮ್ಮ ಉದ್ದೇಶವಲ್ಲ; ಭೂಮಿ ಕಳೆದುಕೊಂಡವರಿಗೆ ನ್ಯಾಯಯುತ ಉದ್ಯೋಗ ದೊರಕಿಸಿಕೊಡುವುದೇ ನಮ್ಮ ಹೋರಾಟದ ಉದ್ದೇಶ ಎಂದು ಸತ್ಯನಾರಾಯಣರಾವ್ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಎಸ್.ಜಿ. ಪ್ರಭು ಮಡಿವಾಳ, ಭೀಮಣ್ಣ ಗೌಡ, ಶರಣಪ್ಪ ಗೌಡ, ರಾಘವೇಂದ್ರ, ತಿಮ್ಮಪ್ಪ ಸೇರಿದಂತೆ ಇತರರು ಉಪಸ್ಥಿತರಿದ್ದರು.

ತುಂಗಭದ್ರಾ, ನೀರಾವರಿ ಕಾರ್ಮಿಕರ ಬೇಡಿಕೆ: ಸಚಿವರೊಂದಿಗೆ ಸಭೆ ಯಶಸ್ವಿ



ಬೆಂಗಳೂರು, ಅ.1:

ತುಂಗಭದ್ರಾ ನೀರಾವರಿ ಯೋಜನೆಯ ವಿವಿಧ ವಿಭಾಗಗಳಲ್ಲಿ 25-30 ವರ್ಷಗಳಿಂದ ಸೇವೆ ಸಲ್ಲಿಸುತ್ತಿರುವ ಕಾರ್ಮಿಕರ ಸಮಸ್ಯೆಗಳ ಕುರಿತು ಜಲಸಂಪನ್ಮೂಲ ಸಚಿವ ಎನ್. ಚೆಲುವರಾಯಸ್ವಾಮಿ ಅವರ ನೇತೃತ್ವದಲ್ಲಿ ಗುರುವಾರ ವಿಕಾಸಸೌಧದಲ್ಲಿ ಸಭೆ ನಡೆಯಿತು.

ವರ್ಷಪೂರ್ತಿ ನಿರಂತರ ಕೆಲಸ, ಉದ್ಯೋಗ ಭದ್ರತೆ, 2026ರ ಜನವರಿಯಿಂದ ಬಾಕಿ ಇರುವ ವೇತನ ಪಾವತಿ, ಪಿಎಫ್-ಇಎಸ್‌ಐ ಸಮಸ್ಯೆಗಳ ಪರಿಹಾರ, ಕಾರ್ಮಿಕ ಇಲಾಖೆ ಹಾಗೂ ನ್ಯಾಯಾಲಯದ ಆದೇಶಗಳ ಜಾರಿ, ಟೆಂಡರ್ ಪ್ರಕ್ರಿಯೆಯ ವಿಳಂಬದಿಂದ ಉಂಟಾಗುತ್ತಿರುವ ಸಮಸ್ಯೆಗಳಿಗೆ ಪರಿಹಾರ ಮತ್ತು ಗುತ್ತಿಗೆ ವ್ಯವಸ್ಥೆಯ ಬದಲಿಗೆ ಕಾನೂನುಬದ್ಧ ನೇರ ವೇತನ ಪಾವತಿ ವ್ಯವಸ್ಥೆ ಜಾರಿಗೊಳಿಸುವ ಕುರಿತು ಸಭೆಯಲ್ಲಿ ಸುದೀರ್ಘ ಚರ್ಚೆ ನಡೆಯಿತು.

ಆಗಸ್ಟ್ 19ರಂದು ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ನಡೆದ ಪ್ರತಿಭಟನೆಯ ಸಂದರ್ಭದಲ್ಲಿ ಸರ್ಕಾರದ ಪ್ರತಿನಿಧಿಗಳು ನೀಡಿದ್ದ ಭರವಸೆಗಳನ್ನೂ ಕಾರ್ಮಿಕರ ಪ್ರತಿನಿಧಿಗಳು ಸಚಿವರ ಗಮನಕ್ಕೆ ತಂದರು. ಹಲವು ವರ್ಷಗಳಿಂದ ಒಂದೇ ಸ್ವರೂಪದ ನೀರಾವರಿ ನಿರ್ವಹಣಾ ಕೆಲಸ ನಿರ್ವಹಿಸುತ್ತಿರುವ ಕಾರ್ಮಿಕರಿಗೆ ಶಾಶ್ವತ ಉದ್ಯೋಗ ಭದ್ರತೆ ಕಲ್ಪಿಸಬೇಕು ಎಂದು ಒತ್ತಾಯಿಸಿದರು.

ಕಾರ್ಮಿಕರ ಸಮಸ್ಯೆಗಳನ್ನು ಆಲಿಸಿದ ಸಚಿವ ಚೆಲುವರಾಯಸ್ವಾಮಿ ಅವರು ಬೇಡಿಕೆಗಳ ಕುರಿತು ಸಕಾರಾತ್ಮಕವಾಗಿ ಸ್ಪಂದಿಸಿ, ಅಗತ್ಯ ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದರು. ರಾಯಚೂರು ಜಿಲ್ಲಾ ಉಸ್ತುವಾರಿ ಸಚಿವ ಹಾಗೂ ಸಣ್ಣ ನೀರಾವರಿ ಸಚಿವ ಡಾ. ಅಜಯ್ ಸಿಂಗ್ ಮತ್ತು ವಿಧಾನ ಪರಿಷತ್ ಸದಸ್ಯ, ಮಾಜಿ ಸಚಿವ ಎನ್.ಎಸ್. ಬೋಸರಾಜು ಅವರು ಕೂಡ

3ನೇಯ ಪುಟಕ್ಕೆ

12 ವರ್ಷಗಳ ಬಳಿಕ ಟ್ರಸ್ಟ್ ಆಸ್ತಿ ಮೂಲ ಹಕ್ಕುದಾರರಿಗೆ!

ಆರು ತಿಂಗಳಲ್ಲಿ ಆಸ್ತಿ ಬಿಟ್ಟುಕೊಡಲು ನ್ಯಾಯಾಲಯದ ಆದೇಶ

ಕಲ್ಯಾಣ ಸಂಜೆ ಸುದ್ದಿ

ರಾಯಚೂರು,ಅ.1

ರಜಾ-ಎ-ಮುಸ್ತಫಾ ಎಜುಕೇಷನ್ ಟ್ರಸ್ಟ್‌ಗೆ ಸೇರಿದ ಆಸ್ತಿಯನ್ನು ಮತ್ತೊಂದು ಟ್ರಸ್ಟ್‌ನ ಹೆಸರಿನಲ್ಲಿ ಕಾನೂನುಬಾಹಿರವಾಗಿ ವಶಪಡಿಸಿಕೊಂಡಿರುವ ಆರೋಪಕ್ಕೆ ಸಂಬಂಧಿಸಿದಂತೆ ಸುದೀರ್ಘ ವಿಚಾರಣೆ ನಡೆಸಿದ ನ್ಯಾಯಾಲಯವು, ಆಸ್ತಿಯನ್ನು ಮೂಲ ಟ್ರಸ್ಟ್‌ನವರಿಗೆ ಹಸ್ತಾಂತರಿಸುವಂತೆ ತೀರ್ಪು ನೀಡಿದೆ ಎಂದು ವಕೀಲ ಮರಿಬಸನಗೌಡ ತಿಳಿಸಿದ್ದಾರೆ.



ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಅಬ್ದುಲ್ ರಸೂಲ್ ಸಾಬ್ ಹಾಗೂ ಇತರರು 1994-95ರಲ್ಲಿ ರಜಾ-ಎ-ಮುಸ್ತಫಾ ಎಜುಕೇಷನ್ ಟ್ರಸ್ಟ್ ನೋಂದಣಿ ಮಾಡಿಸಿದ್ದರು. ಲಿಂಗಸೂಗೂರುರಾಯಚೂರು ರಸ್ತೆಯ ಯಕ್ಲಸಪುರ ಸೀಮಾಂತರದಲ್ಲಿರುವ ಸರ್ವೇ ನಂ.126/2-ಎಎ/1ರ ಜಮೀನನ್ನು 2008-09ರಲ್ಲಿ ಟ್ರಸ್ಟ್ ಅಧ್ಯಕ್ಷರ ಹೆಸರಿನಲ್ಲಿ ದಾನಪತ್ರದ ಮೂಲಕ ಪಡೆದುಕೊಳ್ಳಲಾಗಿತ್ತು. ಈ ಜಾಗದಲ್ಲಿ ಶಾಲೆ, ಕಾಲೇಜು, ಮದರಸ ಹಾಗೂ ಮಸೀದಿ ನಿರ್ಮಿಸಲಾಗಿದೆ ಎಂದರು.

ನಂತರ ಮೊಹಮ್ಮದ್ ನಸೀರುದ್ದೀನ್ ಮೆಹರ್ತ, ಮೊಹಮ್ಮದ್ ಅಬ್ದುಲ್ ಹೈ ಫೈರೋಜ್ ಹಾಗೂ ಇತರರು ದಾರುಲ್ ಉಲೂಮ್ ರಜಾ-ಎ-ಮುಸ್ತಫಾ ಗುಲಷನ್-ಎ-ರಾಜ್ವಿ ಹೆಸರಿನಲ್ಲಿ ಮತ್ತೊಂದು ಟ್ರಸ್ಟ್ ರಚಿಸಿ, ಮೂಲ ಟ್ರಸ್ಟ್‌ನ ಆಸ್ತಿಯನ್ನು ತಮ್ಮ ವಶಕ್ಕೆ ಪಡೆದಿದ್ದಾರೆ ಎಂದು ಆರೋಪಿಸಿದರು.

ಈ ಕುರಿತು ಸುಮಾರು 12 ವರ್ಷಗಳಿಂದ ನ್ಯಾಯಾಲಯದಲ್ಲಿ ನಡೆಯುತ್ತಿದ್ದ ದಾವೆಯಲ್ಲಿ, ವಿಚಾರಣೆ ಪೂರ್ಣಗೊಂಡ ಬಳಿಕ ಆಸ್ತಿಯನ್ನು ಅಬ್ದುಲ್ ರಸೂಲ್ ಸಾಬ್ ಹಾಗೂ ಸಂಬಂಧಪಟ್ಟ ಮೂಲ ಹಕ್ಕುದಾರರಿಗೆ ಆರು ತಿಂಗಳೊಳಗೆ ಬಿಟ್ಟುಕೊಡುವಂತೆ ನ್ಯಾಯಾಲಯ ಆದೇಶಿಸಿದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಸಾಹಿದ್, ಮೊಹಮ್ಮದ್ ರಾಜ್, ಮೌನೇಶ್ ಸೇರಿದಂತೆ ಇತರರು ಉಪಸ್ಥಿತರಿದ್ದರು.

ಹಿರಿಯ ನಾಗರಿಕರನ್ನು ಗೌರವಿಸುವುದು ಪ್ರತಿಯೊಬ್ಬ ನಾಗರಿಕನ ಕರ್ತವ್ಯವಾಗಿದೆ

ರಾಯಚೂರು ಅ.01

ಹಿರಿಯ ನಾಗರಿಕರು ನಮ್ಮ ಸಮಾಜದ ದಾರಿದೀಪ ಮತ್ತು ದೇಶದ ನಿಜವಾದ ಸಂಪತ್ತು. ಅವರನ್ನು ಗೌರವಿಸುವುದು ಪ್ರತಿಯೊಬ್ಬ ನಾಗರಿಕನ ಕರ್ತವ್ಯವಾಗಿದೆ ಎಂದು ರಾಯಚೂರು ಸಹಾಯಕ ಆಯುಕ್ತರಾದ ಡಾ.ಹಂಪಣ್ಣ ಸಜ್ಜನ್ ಅವರು ಹೇಳಿದರು.

ಅಕ್ಟೋಬರ್ 01ರ ಗುರುವಾರ ದಂದು ನಗರದ ಕನ್ನಡ ಭವನದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಮಹಾನಗರ ಪಾಲಿಕೆ ರಾಯಚೂರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಜಿಲ್ಲಾ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಶಾಲಾ ಶಿಕ್ಷಣ ಇಲಾಖೆ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ನಿವೃತ್ತಿ ನೌಕರರ ಸಂಘ ಹಾಗೂ ಹಿರಿಯ ನಾಗರೀಕರಿಗಾಗಿ ಶ್ರಮಿಸುತ್ತಿರುವ ಸ್ವಯಂ ಸೇವಾ ಸಂಸ್ಥೆಗಳು ರಾಯಚೂರು ಇವರ ಸಂಯುಕ್ತಾಶ್ರಯದಲ್ಲಿ ವಿಶ್ವ ಹಿರಿಯ ನಾಗರೀಕರ ದಿನಾಚರಣೆ-2026ರ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ವಿಶ್ವ ಹಿರಿಯ ನಾಗರಿಕರ ದಿನಾಚರಣೆಯು ಮೊಟ್ಟಮೊದಲ ಬಾರಿಗೆ 1990ನೇ ಸಾಲಿನಲ್ಲಿ ಆಚರಿಸಿ ಶುರು ಮಾಡಲಾಗಿದೆ. ಯುನೈಟೆಡ್ ನೇಷನ್ಸ್ ಇದನ್ನು 1990ರಲ್ಲಿ ಅಂತರರಾಷ್ಟ್ರೀಯ



ಮಟ್ಟದಲ್ಲಿ ಹಿರಿಯ ನಾಗರಿಕರ ದಿನಾಚರಣೆಯನ್ನು ಆಚರಿಸುವುದಕ್ಕೆ ಪ್ರತಿವರ್ಷ ಅಕ್ಟೋಬರ್ 1ರಂದು ಹಮ್ಮಿಕೊಳ್ಳಲು ನಿರ್ಧರಿಸಲಾಯಿತು.

ಹಿರಿಯ ನಾಗರಿಕರು 60 ವರ್ಷ ಆದ ನಂತರದಲ್ಲಿ ಅವರ ಆರೋಗ್ಯದ ದೃಷ್ಟಿಯಿಂದ ಹಾಗೂ ಸಮಾಜದಲ್ಲಿ ಅವರಿಗೆ ಯಾವ ರೀತಿ ಗೌರವ ಸಿಗುತ್ತಿದೆ ಎಂಬುದನ್ನು ಅರಿಯಲು ಈ ದಿನಾಚರಣೆಯನ್ನು ಹಮ್ಮಿಕೊಳ್ಳಲಾಗುತ್ತದೆ. ಅವರಿಗೆ ಯಾವುದಾದರೂ ಶೋಷಣೆ ಒಳಗಾದರೆ ಯಾವೆಲ್ಲ ಕಾಯ್ದೆ ಕಾನೂನುಗಳು ಇವೆ. ಅವುಗಳ ಕುರಿತು ಅರಿವು ಮೂಡಿಸಲಿಕ್ಕೆ ಈ ಕಾರ್ಯಕ್ರಮವನ್ನು ಅಂತರರಾಷ್ಟ್ರೀಯ ಮಟ್ಟದಲ್ಲಿ ಆಚರಿಸಲಾಗುತ್ತದೆ ಎಂದರು.

ಯಾವ ಇಲಾಖೆಯಲ್ಲಿ ಏನು ಪರಿಹಾರ ಸಿಗುತ್ತದೆ ಎಂದು ಹೇಳಿ ಅರಿವು ಮೂಡಿಸುವುದೇ ಈ ಕಾರ್ಯಕ್ರಮದ ಮುಖ್ಯ ಉದ್ದೇಶವಾಗಿದೆ. ಹಿರಿಯ ನಾಗರಿಕರು ಅಂದರೆ, ಮನಸ್ಸಿಗೆ ವಯಸ್ಸಾಗಿಲ್ಲ, ದೇಹಕ್ಕೆ ಮಾತ್ರ ವಯಸ್ಸಾಗಿರುತ್ತದೆ. ಅವರಲ್ಲಿ ಬಹಳಷ್ಟು ಅನುಭವಗಳು ಇರುತ್ತವೆ ಎಂದರು.

ಹಿರಿಯ ನಾಗರಿಕರು ಸಾಕಷ್ಟು ಅನುಭವಗಳನ್ನು ಪಡೆದುಕೊಂಡಿರುತ್ತಾರೆ. ಹಾಗಾಗಿ ನಾವು ಯಾವ ರೀತಿ ಒಂದು ಮರ ಬಹಳ ಸಮೃದ್ಧವಾಗಿ ಅದು ಫಲ ಕೊಡುತ್ತದೆ ಅಂತ ಹೇಳಿದರೆ, ಅದರ ಬೇರು ಬಹಳ ಡೀಪ್ ಆಗಿರುತ್ತದೆ ಮತ್ತು ಬಹಳಷ್ಟು ಗಟ್ಟಿಯಾಗಿರುತ್ತದೆ. ಈ ಸಮಾಜದಲ್ಲಿ ಏನಾದರೂ ನಾವು ಒಳ್ಳೆ ಸಂಸ್ಕಾರ, ಪ್ರೀತಿ, ಗೌರವ ತೋರಿಸುವಂತದ್ದು ಏನಾದರೂ ಇದ್ದರೆ ಅವರಿಂದ ನಾವು ಕಲಿಬೇಕಾಗುತ್ತದೆ ಎಂದರು.

ಹಿರಿಯ ನಾಗರಿಕರ ಕಲ್ಯಾಣ ಕಾಯ್ದೆ 2007ರ ಅಡಿಯಲ್ಲಿ 60 ವರ್ಷ ಆದಂತಹ ಹಿರಿಯ ನಾಗರಿಕರಿಗೆ ಏನಾದರೂ ಮನೆಯಲ್ಲಿ ಮಕ್ಕಳು ಉಪಜೀವನಕ್ಕೆ ಅಥವಾ ಅವರ ದೈನಂದಿನ ಜೀವನ ನಡೆಸಲಿಕ್ಕೆ ತೊಂದರೆ ನೀಡಿದರೆ ಕಾನೂನಿನ ಅಡಿಯಲ್ಲಿ ಸಹಾಯ

3ನೇಯ ಪುಟಕ್ಕೆ

ಅಸ್ಕಿಹಾಳ ಗೋವಿಂದ ದಾಸರ ಸ್ಮರಣೆಗೆ 'ಗೋವಿಂದ ಗಾನ'

ಅಕ್ಟೋಬರ್ 3, 4ರಂದು ಜಂಬಲದಿನ್ನಿ ರಂಗಮಂದಿರದಲ್ಲಿ ದಾಸ ಸಾಹಿತ್ಯದ ವೈಭವ



ರಾಯಚೂರು, ಅ.1: ದಾಸ ಸಾಹಿತ್ಯದ ಮೂಲಕ ಭಕ್ತಿ ಸಂದೇಶವನ್ನು ಜನಮಾನಸಕ್ಕೆ ತಲುಪಿಸಿದ ಶ್ರೀ ಅಸ್ಕಿಹಾಳ ಗೋವಿಂದ ದಾಸರ ಸಂಸ್ಮರಣೋತ್ಸವ ಅಂಗವಾಗಿ ಅ.3 ಹಾಗೂ 4ರಂದು ನಗರದ ಪಂಡಿತ ಸಿದ್ದರಾಮ ಜಂಬಲದಿನ್ನಿ ರಂಗಮಂದಿರದಲ್ಲಿ 'ಗೋವಿಂದ ಗಾನ' ಕಾರ್ಯಕ್ರಮ ನಡೆಯಲಿದೆ.

ಹರಿದಾಸ ಸೇವಾ ಇಂಟರ್‌ನ್ಯಾಷನಲ್ ಬೆಂಗಳೂರು ಅಧ್ಯಕ್ಷ ಹಾಗೂ ಖ್ಯಾತ ಗಾಯಕ ರಾಯಚೂರು ಶೇಷಗಿರಿದಾಸ ಅವರು ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಈ ಮಾಹಿತಿ ನೀಡಿದರು.

3ನೇಯ ಪುಟಕ್ಕೆ

ಬಾಗಲಕೋಟೆ :ಅ.5 ರಂದು ಜಿಲ್ಲೆಗೆ ಕೇಂದ್ರ ಬರ ಅಧ್ಯಯನ ತಂಡ ಭೇಟಿ

ಬಾಗಲಕೋಟೆ,ಸೆ.30-

ಜಿಲ್ಲೆಯಲ್ಲಿ ಉಂಟಾಗಿರುವ ಬರ ಪರಿಸ್ಥಿತಿಯನ್ನು ಪರಿಶೀಲಿಸಿ, ವಾಸ್ತವ ಸ್ಥಿತಿಗತಿಗಳ ಅಧ್ಯಯನ ನಡೆಸುವ ಉದ್ದೇಶದಿಂದ ಕೇಂದ್ರ ಬರ ಅಧ್ಯಯನ ತಂಡವು ಅ.5 ರಂದು ಬಾಗಲಕೋಟೆ ಜಿಲ್ಲೆಗೆ ಭೇಟಿ ನೀಡಲಿದೆ ಎಂದು ಜಿಲ್ಲಾಧಿಕಾರಿ ಸಂಗಪ್ಪ ತಿಳಿಸಿದರು.

ಜಿಲ್ಲಾಧಿಕಾರಿಗಳ ಸಭಾಂಗಣದಲ್ಲಿ ಮಂಗಳವಾರ ಜಿಲ್ಲೆಯ ಬರ ಪರಿಸ್ಥಿತಿ ಕುರಿತು ಜರುಗಿದ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು ಪಾಟ್ನಾದ ಭತ್ತ ಅಭಿವೃದ್ಧಿ ಇಲಾಖೆಯ ನಿರ್ದೇಶಕ ಮಾನ್ ಸಿಂಗ್ ಅವರ ನೇತೃತ್ವದ ಕೇಂದ್ರ ಬರ ಅಧ್ಯಯನ ತಂಡದಲ್ಲಿ ನವದೆಹಲಿಯ ವೆಚ್ಚ ಇಲಾಖೆಯ ಭಾರತ ಸರ್ಕಾರದ ಅಧೀನ ಕಾರ್ಯದರ್ಶಿ ಪಾರ್ಥಪಾಲ್ ಹಾಗೂ ನವದೆಹಲಿಯ ಗ್ರಾಮೀಣ ಅಭಿವೃದ್ಧಿ ಇಲಾಖೆಯ ಅಧೀನ ಕಾರ್ಯದರ್ಶಿ ರಾಕೇಶ ಕುಮಾರ ಇದ್ದಾರೆಂದು ತಿಳಿಸಿದರು.



ಕೇಂದ್ರ ಬರ ಅಧ್ಯಯನ ತಂಡವು ಜಿಲ್ಲೆಯ ಬರಪೀಡಿತ ಪ್ರದೇಶಗಳಿಗೆ ಭೇಟಿ ನೀಡಿ, ಪ್ರಸಕ್ತ ಸಾಲಿನ ಮಳೆ ಪ್ರಮಾಣ, ಮಳೆ ಕೊರತೆಯಿಂದ ಉಂಟಾಗಿರುವ ಪರಿಸ್ಥಿತಿ, ಕೃಷಿ ಚಟುವಟಿಕೆಗಳ ಮೇಲಾದ ಪರಿಣಾಮ, ವಿವಿಧ ಬೆಳೆಗಳ ಸ್ಥಿತಿಗತಿ ಹಾಗೂ ಬೆಳೆ ಹಾನಿ ಸೇರಿದಂತೆ ಬರ ಪರಿಸ್ಥಿತಿಗೆ ಸಂಬಂಧಿಸಿದ ವಿವಿಧ ಅಂಶಗಳನ್ನು ಪರಿಶೀಲಿಸಲಿದೆ. ಅಲ್ಲದೆ, ಬರದಿಂದ ರೈತರು ಎದುರಿಸುತ್ತಿರುವ ಸಮಸ್ಯೆಗಳು, ಕೃಷಿ ಹಾಗೂ ಜಾನುವಾರು ಸಾಕಾಣಿಕೆ ಚಟುವಟಿಕೆಗಳ ಮೇಲಾದ ಪರಿಣಾಮ, ಕುಡಿಯುವ ನೀರು, ಜಾನುವಾರುಗಳಿಗೆ ಅಗತ್ಯವಿರುವ ಮೇವಿನ ಲಭ್ಯತೆ ಸೇರಿದಂತೆ ಬರ ಪರಿಸ್ಥಿತಿಗೆ ಸಂಬಂಧಿಸಿದ ಪ್ರಮುಖ ವಿಷಯಗಳ ಕುರಿತು ಅಧಿಕಾರಿಗಳಿಂದ ಮಾಹಿತಿ ಪಡೆಯಲಿದ್ದಾರೆಂದು ತಿಳಿಸಿದರು. ತಂಡವು ಸ್ಥಳೀಯವಾಗಿ ಪರಿಶೀಲನೆ ನಡೆಸುವ ಸಂದರ್ಭದಲ್ಲಿ ಸಂಬಂಧಿಸಿದ ಇಲಾಖೆಗಳ ಅಧಿಕಾರಿಗಳು ಜಿಲ್ಲೆಯ ಬರ ಪರಿಸ್ಥಿತಿಯ ಸಮಗ್ರ ಮಾಹಿತಿಯನ್ನು ಒದಗಿಸಬೇಕು. ಮಳೆ ಕೊರತೆ, ಬಿತ್ತನೆ ಪ್ರದೇಶ, ಬೆಳೆಗಳ ಪ್ರಸ್ತುತ ಸ್ಥಿತಿ, ಹಾನಿಗೊಳಗಾದ ಪ್ರದೇಶ ಹಾಗೂ ರೈತರಿಗೆ ಉಂಟಾಗಿರುವ ತೊಂದರೆಗಳ ಕುರಿತು ಅಗತ್ಯ ದಾಖಲೆಗಳು ಮತ್ತು ಮಾಹಿತಿಯನ್ನು ಸಿದ್ಧಪಡಿಸಿಕೊಳ್ಳುವಂತೆ ಅಧಿಕಾರಿಗಳಿಗೆ ಜಿಲ್ಲಾಧಿಕಾರಿಗಳು ಸೂಚಿಸಿದರು.

ಕೇಂದ್ರ ತಂಡದ ಸ್ಥಳ ಪರಿಶೀಲನೆ ಹಾಗೂ ಅಧಿಕಾರಿಗಳಿಂದ ಪಡೆಯುವ ಮಾಹಿತಿಯ ಆಧಾರದ ಮೇಲೆ ಜಿಲ್ಲೆಯ ಬರ ಪರಿಸ್ಥಿತಿಯ ವಾಸ್ತವ ಚಿತ್ರಣವನ್ನು ಕೇಂದ್ರ ಸರ್ಕಾರದ ಗಮನಕ್ಕೆ ತರಲು ಅನುಕೂಲವಾಗಲಿದೆ.

ಸಭೆಯಲ್ಲಿ ಜಿ.ಪಂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಗಜಾನನ ಬಾಲೆ, ಉಪ ಕಾರ್ಯದರ್ಶಿ ಎನ್.ವಾಯ್.ಬಸರಿಗಿಡದ, ಜಂಟಿ ಕೃಷಿ ನಿರ್ದೇಶಕ ಟಿ.ಎಸ್.ರುದ್ರೇಶಪ್ಪ, ತೋಟಗಾರಿಕೆ ಇಲಾಖೆಯ ಜಂಟಿ ನಿರ್ದೇಶಕ ರವೀಂದ್ರ ಹಕಾಟಿ, ಜಿ.ಪಂ ಮುಖ್ಯ ಯೋಜನಾಧಿಕಾರಿ ಅಲ್ಲಮಪ್ರಭು ಅಲ್ಲಾಪೂರ, ಪಶು ಇಲಾಖೆಯ ಉಪ ನಿರ್ದೇಶಕ ಎಸ್.ಎಚ್.ಕರಡಿಗುಡ್ಡ, ಗ್ರಾಮೀಣ ಕುಡಿಯುವ ನೀರು ಯೋಜನೆಯ ಮುಖ್ಯ ಅಭಿಯಂತರ ಬಿರಾದಾರ ಸೇರಿದಂತೆ ಇತರರು ಉಪಸ್ಥಿತರಿದ್ದರು.

ವಿಭಾಗ ಮಟ್ಟದ ದಸರಾ ಕ್ರೀಡಾಕೂಟಕ್ಕೆ ಚಾಲನೆ



ಕಲಬುರಗಿ,ಸೆ.30

ಕಲಬುರಗಿ ನಗರದ ಚಂದ್ರಶೇಖರ ಪಾಟೀಲ ಕ್ರೀಡಾಂಗಣದಲ್ಲಿ ಬುಧವಾರ ನಡೆದ ಕಲಬುರಗಿ ವಿಭಾಗ ಮಟ್ಟದ ದಸರಾ ಕ್ರೀಡಾಕೂಟ ಸಿ.ಎಂ ಕಪ್-2026ಗೆ ಕಲಬುರಗಿ ಉಪ ವಿಭಾಗದ ಸಹಾಯಕ ಆಯುಕ್ತರಾದ ರಿತಿಕಾ ವರ್ಮಾ ಚಾಲನೆ ನೀಡಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯಿಂದ ಆಯೋಜಿಸಿದ ಕ್ರೀಡಾಕೂಟದಲ್ಲಿ ಅಥ್ಲೆಟಿಕ್ಸ್ , ಈಜು, ಲಾನ್ ಟೆನಿಸ್, ಹ್ಯಾಂಡ್ ಬಾಲ್, ಜುಡೋ, ಶೂಟಿಂಗ್ ವಿಭಾಗದಲ್ಲಿ ಸ್ಪರ್ಧೆಗಳನ್ನು ಅಯೋಜಿಸಲಾಗಿತ್ತು.

ಹಾಕಿ ತರಬೇತುದಾರ ಸಂಜಯ ಬಾಣದ, ಅಥ್ಲೆಟಿಕ್ ತರಬೇತುದಾರ ರಾಜು ಬಾಬು ಚವ್ಹಾಣ, ಬಾಸ್ಕೆಟಬಾಲ್ ತರಬೇತುದಾರ ಪ್ರವೀಣ ಕುಮಾರ, ಜುಡೋ ತರಬೇತುದಾರ ಅಶೋಕ ಎಂ., ಖೇಲೋ ಇಂಡಿಯಾ ತರಬೇತುದಾರ ಸಂತೋಷ ಭಾವಿಮನಿ, ಈಜು ತರಬೇತುದಾರರಾದ ರೇಣುಕಾ ಬಿರಾ ಮತ್ತು ಮಚೇಂದ್ರಸಿಂಗ್ ಠಾಕೂರ, ಕಚೇರಿ ಸಿಬ್ಬಂದಿ ರಾಜಕುಮಾರ ಕೋರಳ್ಳಿ ಸೇರಿದಂತೆ ಅನೇಕರು ಇದ್ದರು.

ಆಪದ್ ಮಿತ್ರ ಯೋಜನೆ: 300 ಸ್ವಯಂ ಸೇವಕರಿಗೆ ರಕ್ಷಣಾ ಕಿಟ್ ವಿತರಣೆ

ಕಲಬುರಗಿ,ಸೆ.30

ರಾಷ್ಟ್ರೀಯ ವಿಪತ್ತು ನಿರ್ವಹಣಾ ಪ್ರಾಧಿಕಾರದ ಕೇಂದ್ರ ಪುರಸ್ಕೃತ ಆಪದ್ ಮಿತ್ರ ಯೋಜನೆಯಡಿ ವಿಪತ್ತಿನ ಸಂದರ್ಭದಲ್ಲಿ ತುರ್ತಾಗಿ ರಕ್ಷಣಾ ಕಾರ್ಯಚರಣೆಯಲ್ಲಿ ತೊಡಗುವ ಜಿಲ್ಲೆಯ 300 ಸ್ವಯಂ ಸೇವಕರಿಗೆ ಜಿಲ್ಲಾಧಿಕಾರಿ ಇಕ್ರಂ ಶರೀಫ್ ಅವರು ಬುಧವಾರ ತಮ್ಮ ಕೊಠಡಿಯಲ್ಲಿ ರಕ್ಷಣಾ ಸಾಮಗ್ರಿ ಒಳಗೊಂಡ ಕಿಟ್ ವಿತರಣೆ ಮಾಡಿದರು.

ಪ್ರವಾಹ, ಚಂಡಮಾರುತ, ಭೂಕುಸಿತ ಹಾಗೂ ಭೂಕಂಪ ಸೇರಿದಂತೆ ವಿವಿಧ ವಿಪತ್ತುಗಳ ಸಂದರ್ಭದಲ್ಲಿ ಜನರ ರಕ್ಷಣೆಗೆ ತುರ್ತಾಗಿ ಧಾವಿಸಲು ಕಲಬುರಗಿ ಜಿಲ್ಲೆಯಿಂದ 300 ಸ್ವಯಂಸೇವಕರನ್ನು ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರದ ವತಿಯಿಂದ ಆಯ್ಕೆ ಮಾಡಿ ಅಗತ್ಯ ತರಬೇತಿ ಸಹ ನೀಡಲಾಗಿರುತ್ತದೆ.

ವಿಪತ್ತು ಪರಿಸ್ಥಿತಿಯಲ್ಲಿ ತುರ್ತು ರಕ್ಷಣಾ ಕಾರ್ಯಾಚರಣೆಗಳಿಗೆ ನೆರವಾಗುವಂತೆ ಅಗತ್ಯ ರಕ್ಷಣಾ ಸಾಮಗ್ರಿಗಳನ್ನು ಒಳಗೊಂಡ ಉಋಟ್ಛಿ ಜಟ್ಝಿಢ ಕ್ಷಿಥಿಟಟ್ಲಭಟ್ಟಿ ಓಜಿಠಿಗಳನ್ನು ಇಂದಿಲ್ಲಿ ಆಯ್ದ ಸ್ವಯಂ ಸೇವಕರಿಗೆ ಡಿ.ಸಿ ಸಾಂಕೇತಿಕವಾಗಿ ವಿತರಿಸಿದರು.

ಪ್ರಭಾರಿ ಜಿಲ್ಲಾ ಅಗ್ನಿ ಶಾಮಕ ಅಧಿಕಾರಿ ವಿಶ್ವನಾಥ, ಅಗ್ನಿಶಾಮಕ ಠಾಣಾಧಿಕಾರಿ ಪ್ರವೀಣ್, ಸಿಬ್ಬಂದಿಗಳಾದ ಮಲ್ಲಿಕಾರ್ಜುನ ಉದನೂರ, ಆನಂದ ಸಿರಗಾಪೂರ, ಯುಸುಫ್ ರಾಜಾಪುರ, ಮಹಿಮೂದ್ದಿನ್ ಇದ್ದರು.

ಆರೋಗ್ಯಕರ ಹೃದಯದಿಂದ ಸದೃಢ ಜೀವನ ಸಾಧ್ಯ: ದೀಪಿಕಾ ದಾಸರ್



ಬಾಗಲಕೋಟೆ,ಸೆ.30-

ಆರೋಗ್ಯಕರ ಹೃದಯವನ್ನು ಕಾಪಾಡಿಕೊಳ್ಳುವುದರಿಂದ ಸದೃಢ ಹಾಗೂ ಆರೋಗ್ಯಕರ ಜೀವನ ನಡೆಸಲು ಸಾಧ್ಯ ಎಂದು ಬಿವಿವಿಎಸ್ ನರ್ಸಿಂಗ್ ಮಹಾವಿದ್ಯಾಲಯದ ಮೆಡಿಕಲ್ ಸರ್ಜರಿ ವಿಭಾಗದ ಮುಖ್ಯಸ್ಥೆ ಕುಮಾರಿ ದೀಪಿಕಾ ದಾಸರ್ ಹೇಳಿದರು.

ನಗರದ ಬಸವೇಶ್ವರ ವಿಜ್ಞಾನ ಮಹಾವಿದ್ಯಾಲಯದ ಐಕ್ಯೂಎಸಿ ಸಂಯೋಜಿತ ರಾಷ್ಟ್ರೀಯ ಸೇವಾ ಯೋಜನೆ ಘಟಕ-1, ಘಟಕ-2 ಹಾಗೂ ಬಿವಿವಿಎಸ್ ನರ್ಸಿಂಗ್ ಮಹಾವಿದ್ಯಾಲಯದ ಸಂಯುಕ್ತಾಶ್ರಯದಲ್ಲಿ ವಿಶ್ವ ಹೃದಯ ದಿನದ ಅಂಗವಾಗಿ ಆಯೋಜಿಸಿದ್ದ ಹೃದಯ ಜಾಗೃತಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಹೃದಯವು ಮಾನವ ದೇಹದ ಪ್ರಮುಖ ಅಂಗವಾಗಿದ್ದು, ವಾಹನಕ್ಕೆ ಎಂಜಿನ್ ಹೇಗೆ ಮುಖ್ಯವೋ ಅದೇ ರೀತಿ ದೇಹದ ಚೈತನ್ಯವನ್ನು ಕಾಪಾಡುವಲ್ಲಿ ಹೃದಯ ಪ್ರಮುಖ ಪಾತ್ರ ವಹಿಸುತ್ತದೆ. ಹೃದಯವು ದಿನದ 24 ಗಂಟೆಯೂ ನಿರಂತರವಾಗಿ ಕಾರ್ಯನಿರ್ವಹಿಸುತ್ತದೆ. ಹೃದಯದ ಕಾರ್ಯದಲ್ಲಿ ಏನಾದರೂ ತೊಂದರೆ ಉಂಟಾದರೆ ಜೀವನದ ಮೇಲೆಯೇ ಗಂಭೀರ ಪರಿಣಾಮ ಬೀರುವ ಸಾಧ್ಯತೆ ಇದೆ. ಆದ್ದರಿಂದ ಹೃದಯದ ಆರೋಗ್ಯದ ಬಗ್ಗೆ ಪ್ರತಿಯೊಬ್ಬರೂ ಕಾಳಜಿ ವಹಿಸಬೇಕು ಎಂದು ಅವರು ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಬಸವೇಶ್ವರ ವಿಜ್ಞಾನ ಮಹಾವಿದ್ಯಾಲಯದ ಪ್ರಾಚಾರ್ಯರಾದ ಎಸ್.ಆರ್. ದೇಶಪಾಂಡೆ ಮಾತನಾಡಿ, ಆಧುನಿಕ ಜೀವನಶೈಲಿಯ ಒತ್ತಡದಿಂದಾಗಿ ಸಮಯದ ಅಭಾವದಲ್ಲಿ ಸರಿಯಾದ ಆಹಾರ ಸೇವನೆ, ನಿದ್ರೆ ಹಾಗೂ ಆರೋಗ್ಯದ ಆರೈಕೆಗೆ ಜನರು ಹೆಚ್ಚಿನ ಗಮನ ನೀಡುತ್ತಿಲ್ಲ. ಇಂತಹ ಜೀವನಶೈಲಿ ಮುಂದಿನ ದಿನಗಳಲ್ಲಿ ಆರೋಗ್ಯ ಸಮಸ್ಯೆಗಳಿಗೆ ಕಾರಣವಾಗಬಹುದು. ವಿದ್ಯಾರ್ಥಿಗಳು ಆರೋಗ್ಯಕರ ದಿನಚರಿಯನ್ನು ರೂಢಿಸಿಕೊಳ್ಳಬೇಕು ಎಂದು ಜಾಗೃತಿ ಮೂಡಿಸಿದರು.

ಕಾರ್ಯಕ್ರಮದಲ್ಲಿ ಬಸವೇಶ್ವರ ವಿಜ್ಞಾನ ಪದವಿಪೂರ್ವ ವಿದ್ಯಾಲಯದ ಪ್ರಾಚಾರ್ಯ ಡಾ. ಎನ್.ಎಚ್. ಬೇವಿನಹಳ್ಳಿ, ಐಕ್ಯೂಎಸಿ ಸಂಯೋಜಕ ಡಾ. ದೇವಪ್ಪ ಲಮಾಣಿ, ಸಿಬ್ಬಂದಿ ಕಾರ್ಯದರ್ಶಿ ಡಾ. ಎ.ಎಂ. ಸತ್ಯನಾಯಕ, ರಾಷ್ಟ್ರೀಯ ಸೇವಾ ಯೋಜನೆ ಘಟಕ-1ರ ಸಂಯೋಜನಾಧಿಕಾರಿ ಶಿವಾನಂದ ಶಿವನಗುತ್ತಿ ಹಾಗೂ ಘಟಕ-2ರ ಸಂಯೋಜನಾಧಿಕಾರಿ ಎಸ್.ಕೆ. ಜಹಾಗೀರದಾರ ಸೇರಿದಂತೆ ನರ್ಸಿಂಗ್ ಮಹಾವಿದ್ಯಾಲಯದ ವಿದ್ಯಾರ್ಥಿಗಳು, ವಿಜ್ಞಾನ ಮಹಾವಿದ್ಯಾಲಯದ ಬೋಧಕ, ಬೋಧಕೇತರ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ವೈಷ್ಣವಿ ಮತ್ತು ಅನುಷಾ ಕಾರ್ಯಕ್ರಮ ನಿರೂಪಿಸಿದರು. ಕು. ಪೂರ್ಣಿಮಾ ಹಾಗೂ ಸಂಗಡಿಗರು ಪ್ರಾರ್ಥನೆ ಸಲ್ಲಿಸಿದರು. ಶಿವಾನಂದ ಶಿವನಗುತ್ತಿ ಸ್ವಾಗತಿಸಿ, ಪರಿಚಯಿಸಿದರು. ನರ್ಸಿಂಗ್ ಮಹಾವಿದ್ಯಾಲಯದ ವಿದ್ಯಾರ್ಥಿಗಳು ಹೃದಯ ಆರೋಗ್ಯದ ಕುರಿತು ಕಿರು ನಾಟಕ ಪ್ರದರ್ಶಿಸಿದರು. ಕು. ಸಿದ್ದೇಶ್ ಶೆಟ್ಟರ್ ವಂದಿಸಿದರು.

ಬೀದರ ಪಶುವೈದ್ಯಕೀಯ ಮಹಾವಿದ್ಯಾಲಯದಲ್ಲಿ ವಿಶ್ವ ರೇಬಿಸ್ ದಿನಾಚರಣೆ ಹಾಗೂ ಜಾಗೃತಿ ಕಾರ್ಯಕ್ರಮ

ಬೀದರ,ಸೆ.30-

ರೇಬೀಸ್ ರೋಗಮುಕ್ತ ಸಮಾಜ ನಿರ್ಮಾಣ ಮಾಡಲು ಸಾರ್ವಜನಿಕರಲ್ಲಿ ವ್ಯಾಪಕ ಜಾಗೃತಿ ಮೂಡಿಸುವುದು ಅತ್ಯಗತ್ಯ. ರೋಗ ಬಂದ ನಂತರ ಚಿಕಿತ್ಸೆ ಪಡೆಯುವುದಕ್ಕಿಂತ ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಳ್ಳುವುದು ಹೆಚ್ಚು ಸೂಕ್ತ ಎಂದು ಬೀದರ್‌ನ ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದ ವ್ಯವಸ್ಥಾಪಕ ಮಂಡಳಿಯ ಸದಸ್ಯರಾದ ಬಸವರಾಜ್ ಭತಮುರ್ಗೆ ಅವರು ಹೇಳಿದರು.



ಬೀದರ ಪಶುವೈದ್ಯಕೀಯ ಮಹಾವಿದ್ಯಾಲಯದ (ವಿ.ಸಿ.ಬಿ.) ಆರೋಗ್ಯ ಕೇಂದ್ರ, ಮಹಾವಿದ್ಯಾಲಯದ ಹಳೆಯ ವಿದ್ಯಾರ್ಥಿಗಳ ಸಂಘ (ಅಲುಮ್ನಿ ಅಸೋಸಿಯೇಷನ್) ಹಾಗೂ ಹೈದರಾಬಾದ್‌ನ ಇಂಡಿಯನ್ ಇಮ್ಯು ನೊಲಾಜಿಕಲ್ಸ್ ಲಿಮಿಟೆಡ್ ಇವುಗಳ ಜಂಟಿ ಸಹ ಯೋಗದಲ್ಲಿ ಆಯೋಜಿಸಲಾಗಿದ್ದ 20ನೇ ವಿಶ್ವ ರೇಬೀಸ್ ದಿನ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಫ್ರೆಂಚ್ ವಿಜ್ಞಾನಿ ಲೂಯಿ ಪಾಶ್ಚರ್ ಅವರ ಪುಣ್ಯಸ್ಮರಣೆಯ ಅಂಗವಾಗಿ ರೇಬೀಸ್ ರೋಗ ತಡೆಗಟ್ಟುವಿಕೆ ಮತ್ತು ನಿಯಂತ್ರಣದ ಕುರಿತು ವಿದ್ಯಾರ್ಥಿಗಳು, ವೃತ್ತಿಪರರು, ಬೋಧಕ ಸಿಬ್ಬಂದಿ, ಸಾಕುಪ್ರಾಣಿಗಳ ಮಾಲೀಕರು ಹಾಗೂ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲು ಪ್ರಮುಖ ಮೂರು ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಯಿತು.

ರೇಬೀಸ್ ರೋಗ ತಡೆಗಟ್ಟುವ ಮುನ್ನೆಚ್ಚರಿಕಾ ಕ್ರಮವಾಗಿ ಹೆಚ್ಚಿನ ಅಪಾಯ ಎದುರಿಸುವ (ಹೈ-ರಿಸ್ಕ್) ಗುಂಪಿನಲ್ಲಿರುವ ವಿದ್ಯಾರ್ಥಿಗಳು ಮತ್ತು ಬೋಧಕ ಸಿಬ್ಬಂದಿಗೆ ಉಚಿತ ರೇಬೀಸ್ ಮುನ್ನೆಚ್ಚರಿಕಾ ಲಸಿಕೆಯನ್ನು ನೀಡಲಾಯಿತು. ಕಾರ್ಯಕ್ರಮದ ಮುಖ್ಯ ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿದ್ದ ಎಸ್ ಆರ್ ಡಿಡಿಎಲ್ ವಿಭಾಗದ ಪ್ರಾಧ್ಯಾಪಕ ಹಾಗೂ ಮುಖ್ಯಸ್ಥರಾದ ಡಾ. ಶಿವರಾಜ್ ಮುರಗ್ ಮಾತನಾಡಿ, ಪ್ರಸಕ್ತ ಸಾಲಿನ ವಿಶ್ವ ರೇಬೀಸ್ ದಿನದ ಘೋಷವಾಕ್ಯ (ಥೀಮ್) ಒಟ್ಟಾಗಿ ಶ್ರಮಿಸೋಣ, ರೇಬೀಸ್ ಗೆಲ್ಲೋಣ ಎಂಬ ವಿಷಯದ ಕುರಿತು ವಿಶೇಷ ಉಪನ್ಯಾಸ ನೀಡಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಮಹಾವಿದ್ಯಾಲಯದ ಡೀನ್ ಡಾ.ಎಂ.ಕೆ. ತಾಂಡಲೆ ಅವರು, ಪ್ರಾಣಿಗಳಲ್ಲಿ ರೇಬೀಸ್ ರೋಗವನ್ನು ತಡೆಗಟ್ಟುವುದರ ಮೂಲಕ ಮಾತ್ರ ಮಾನವರಲ್ಲಿ ಈ ರೋಗ ಹರಡುವುದನ್ನು ತಡೆಯಲು ಸಾಧ್ಯ. ಇದಕ್ಕೆ ಪ್ರತಿಯೊಬ್ಬರ ಸಹಕಾರ ಮತ್ತು ಒಗ್ಗಟ್ಟಿನ ಕೆಲಸ ಅತ್ಯಗತ್ಯ ಎಂದು ಒತ್ತು ನೀಡಿದರು.

ಕರ್ನಾಟಕ ಪಶುವೈದ್ಯಕೀಯ ವಿಶ್ವವಿದ್ಯಾಲಯದ ವ್ಯವಸ್ಥಾಪಕ ಮಂಡಳಿ ಸದಸ್ಯರಾದ ವಿಜಯಕುಮಾರ್ ಪಾಟೀಲ್ ಅವರು ಮಾತನಾಡಿ, ದಕ್ಷಿಣ ಭಾರತದಾದ್ಯಂತ ಅಗತ್ಯವಿರುವ ಲಸಿಕೆ ಪೂರೈಕೆ ಮಾಡುವಲ್ಲಿ ಬೆಂಗಳೂರಿನ ಐ.ಎ.ಹೆಚ್. ಮತ್ತು ವಿ.ಬಿ. ಸಂಸ್ಥೆಯು ವಹಿಸುತ್ತಿರುವ ಪ್ರಮುಖ ಪಾತ್ರವನ್ನು ಪ್ರಶಂಸಿಸಿದರು. ಈ ವಿಚಾರ ಸಂಕಿರಣದಲ್ಲಿ 80ಕ್ಕೂ ಹೆಚ್ಚು ವಿದ್ಯಾರ್ಥಿಗಳು ಹಾಗೂ ಬೋಧಕ ಸಿಬ್ಬಂದಿ ಪಾಲ್ಗೊಂಡಿದ್ದರು.

ಕಾರ್ಯಕ್ರಮದ ಕೊನೆಯಲ್ಲಿ ಬೀದರ ಪಶುವೈದ್ಯಕೀಯ ಮಹಾವಿದ್ಯಾಲಯದ ಹಳೆಯ ವಿದ್ಯಾರ್ಥಿಗಳ ಸಂಘದ ವತಿಯಿಂದ ಸಂಪನ್ಮೂಲ ವಿಜ್ಞಾನಿ ಡಾ.ಶಿವರಾಜ್ ಮುರಗ್ ಅವರನ್ನು ಆತ್ಮೀಯವಾಗಿ ಸನ್ಮಾನಿಸಲಾಯಿತು.

ಬೀದರ ಪಶುವೈದ್ಯಕೀಯ ಮಹಾವಿದ್ಯಾಲಯ, ಬೆಂಗಳೂರಿನ ಐ.ಎ.ಹೆಚ್. ಮತ್ತು ವಿ.ಬಿ. ಹಾಗೂ ಹಳೆಯ ವಿದ್ಯಾರ್ಥಿಗಳ ಸಂಘದ ಜಂಟಿ ಆಶ್ರಯದಲ್ಲಿ ಸಾಕುಪ್ರಾಣಿಗಳಿಗೆ ಉಚಿತ ರೇಬೀಸ್ ನಿರೋಧಕ ಲಸಿಕಾ ಶಿಬಿರವನ್ನು ಯಶಸ್ವಿಯಾಗಿ ಆಯೋಜಿಸಲಾಯಿತು.

ಈ ಲಸಿಕಾ ಅಭಿಯಾನದಲ್ಲಿ ಒಟ್ಟು 111 ವಿದ್ಯಾರ್ಥಿಗಳು ಮತ್ತು ಬೋಧಕ ಸಿಬ್ಬಂದಿಗೆ 0, 7 ಮತ್ತು 21 ದಿನಗಳ ವೇಳಾಪಟ್ಟಿಯ ಅನುಸಾರ ನೀಡಲಾಗುವ ಲಸಿಕೆಯ ಮೊದಲ ಡೋಸ್ ಉಚಿತವಾಗಿ ನೀಡಲಾಯಿತು. ಅಲ್ಲದೆ, ಈ ಶಿಬಿರದಲ್ಲಿ ಸಾರ್ವಜನಿಕರ 40ಕ್ಕೂ ಹೆಚ್ಚು ಸಾಕುಪ್ರಾಣಿಗಳಿಗೂ ಉಚಿತವಾಗಿ ರೇಬೀಸ್ ನಿರೋಧಕ ಲಸಿಕೆಯನ್ನು ಹಾಕಲಾಯಿತು.

ಮಹಾವಿದ್ಯಾಲಯದ ಸಂಘಟನಾ ತಂಡದ ಪ್ರಮುಖರಾದ ಡಾ.ಎಂ.ಕೆ. ತಾಂಡಲೆ, ಡಾ.ಮಲ್ಲಿನಾಥ್ ಕೆ.ಸಿ., ಡಾ. ಭಗವಂತಪ್ಪ ಬಿ., ಡಾ.ಶೇಷರಾವ್, ಡಾ.ವೆಂಕನಗೌಡ ಟಿ., ಡಾ.ರೂಪಾಲಿ ಹಾಗೂ ವೈದ್ಯಾಧಿಕಾರಿ ಡಾ.ಶಹಮೀರ್ ಫಾತಿಮಾ ಅವರು ಈ ಕಾರ್ಯಕ್ರಮವನ್ನು ಯಶಸ್ವಿಯಾಗಿ ನಿರ್ವಹಿಸಿದರು.

ಕಾರ್ಮಿಕರಿಗೆ ಮಾಸ್ಟರ್ ಹೆಲ್ತ್ ಚೆಕಪ್ ಹಾಗೂ ಇಎಸ್ಐ ಸೌಲಭ್ಯ ಕಡ್ಡಾಯಗೊಳಿಸಿ- ಜಿಲ್ಲಾಧಿಕಾರಿ ಇಕ್ರಂ ಶರೀಫ್

ಕಲಬುರಗಿ, ಸೆ.30

ಸಫಾಯಿ ಕರ್ಮಚಾರಿಗಳು ಹಾಗೂ ನೈರ್ಮಲ್ಯ ಸಿಬ್ಬಂದಿಯ ಆರೋಗ್ಯ ಭದ್ರತೆಗೆ ಮೊದಲ ಆದ್ಯತೆ ನೀಡಬೇಕು. ವಾರದ ಅಂತ್ಯದೊಳಗೆ ಪ್ರತಿಯೊಬ್ಬ ಸಿಬ್ಬಂದಿಗೂ ಮಾಸ್ಟರ್ ಹೆಲ್ತ್ ಚೆಕಪ್ ಪೂರ್ಣಗೊಳಿಸಲು ಸೂಕ್ತ ವೇಳಾಪಟ್ಟಿ ಸಿದ್ಧಪಡಿಸಿ ವರದಿ ನೀಡಬೇಕು ಎಂದು ಮಹಾನಗರ ಪಾಲಿಕೆ ಅಧಿಕಾರಿಗೆ ಜಿಲ್ಲಾಧಿಕಾರಿ ಇಕ್ರಂ ಶರೀಫ್ ಕಟ್ಟುನಿಟ್ಟಿನ ನಿರ್ದೇಶನ ನೀಡಿದರು.

ಬುಧುವಾರ ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಜಿಲ್ಲಾ ಮಟ್ಟದ ಸಫಾಯಿ ಕರ್ಮಚಾರಿಗಳ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಸಭೆಯಲ್ಲಿ ಸಫಾಯಿ ಕರ್ಮಚಾರಿಗಳು, ವಾಹನ ಚಾಲಕರು ಹಾಗೂ ಕಾರ್ಮಿಕ ವರ್ಗದವರ ಆರೋಗ್ಯ ಭದ್ರತೆ ಮತ್ತು ಇನ್ಶೂರೆನ್ಸ್ ಕುರಿತು ಸುದೀರ್ಘ ಚರ್ಚೆ ನಡೆಸಿದ ಜಿಲ್ಲಾಧಿಕಾರಿಗಳು, ಖಾಸಗಿ ಇನ್ಶೂರೆನ್ಸ್ ಹಾಗೂ ಇಎಸ್ಐ (ಉಖಐ) ಸೌಲಭ್ಯಗಳನ್ನು ಹೋಲಿಕೆ ಮಾಡಿ ಸಿಬ್ಬಂದಿಗೆ ಗರಿಷ್ಠ ಆರೋಗ್ಯ ಸೇವೆ ಲಭಿಸುವಂತೆ ಕ್ರಮವಹಿಸಲು ತಿಳಿಸಿದರು.

ಕಾರ್ಮಿಕ ಇಲಾಖೆಯ ನಿಯಮಾವಳಿಗಳಂತೆ ಪ್ರತಿಯೊಬ್ಬ ನೌಕರನಿಗೂ ಪಿಎಫ್, ಇಎಸ್ಐ ಮತ್ತು ಸಮಯಕ್ಕೆ ಸರಿಯಾಗಿ ವೇತನ ಪಾವತಿಯಾಗುವುದನ್ನು ಅಧಿಕಾರಿಗಳು ಕಡ್ಡಾಯವಾಗಿ ಖಾತ್ರಿಪಡಿಸಿಕೊಳ್ಳಬೇಕು. ಜೊತೆಗೆ, ನೈರ್ಮಲ್ಯ ಸಿಬ್ಬಂದಿಗೆ ಗ್ಲೌಸ್, ಮಾಸ್ಕ್, ನೈಟ್ ಜಾಕೆಟ್ ಮತ್ತು ರೇನ್ ಕೋಟ್‌ಗಳಂತಹ ಸುರಕ್ಷತಾ ಸಾಮಗ್ರಿಗಳನ್ನು ತಕ್ಷಣವೇ ವಿತರಿಸಿ, ಅವುಗಳ ಸರಿಯಾದ ಬಳಕೆಯಾಗುವಂತೆ ನೋಡಿಕೊಳ್ಳಲು ನಿರ್ದೇಶನ ನೀಡಿದರು.

ಇದೇ ವೇಳೆ ನೈರ್ಮಲ್ಯ ಕಾಮಗಾರಿಗಳು ಜಟ್ಟಿಂಗ್ ಹಾಗೂ ಸಕ್ಕಿಂಗ್ ಯಂತ್ರೋಪಕರಣಗಳ ಟೆಂಡರ್ ಪ್ರಕ್ರಿಯೆಯಲ್ಲಿ ಉಂಟಾಗಿರುವ ವಿಳಂಬದ ಕುರಿತು ತೀವ್ರ ಆಕ್ರೋಶ ವ್ಯಕ್ತಪಡಿಸಿದ ಜಿಲ್ಲಾಧಿಕಾರಿಗಳು, ಸಂಪೂರ್ಣ ಕಡತಗಳನ್ನು ಸರಿಪಡಿಸಿ ಮುಂದಿನ 48 ಗಂಟೆಗಳ ಒಳಗೆ ವರದಿ ಸಲ್ಲಿಸುವಂತೆ ಗಡುವು ನೀಡಿದರು. ಸಭೆಗೆ ಪೂರ್ವ ಸಿದ್ಧತೆಯಿಲ್ಲದೆ ಆಗಮಿಸಿ ಅಸ್ಪಷ್ಟ ಮಾಹಿತಿ ನೀಡದ ಅಧಿಕಾರಿಗಳಿಗೆ , ಅಮಾನತುಗೊಳಿಸಲಾಗುವುದು. ಆಡಳಿತ ಯಂತ್ರಾಂಗದಲ್ಲಿ ಯಾವುದೇ ರೀತಿಯ ನಿರ್ಲಕ್ಷ್ಯ ಹಾಗೂ ವಿಳಂಬ ಧೋರಣೆಯನ್ನು ಸಹಿಸುವುದಿಲ್ಲ ಎಂದು ಎಚ್ಚರಿಸಿದರು.

ವಸತಿ ಯೋಜನೆಗಳ ಪರಿಶೀಲನೆ ನಡೆಸಿದ ಅವರು, ಆಳಂದ ಹಾಗೂ ಅಫ್ಜಲಪುರ ತಾಲೂಕುಗಳಲ್ಲಿ 50 ರಿಂದ 70 ಲಕ್ಷ ವೆಚ್ಚದಲ್ಲಿ ಲೇಔಟ್ ಅಭಿವೃದ್ಧಿಪಡಿಸಿ, ಮುಂದಿನ 3 ತಿಂಗಳ ಒಳಗಾಗಿ ನಿವೇಶನ ರಹಿತ ಸಫಾಯಿ ಕರ್ಮಚಾರಿಗಳಿಗೆ ಹಕ್ಕುಪತ್ರ ವಿತರಿಸಲು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಿದರು.

ಶಾಹಾಬಾದ್ ವ್ಯಾಪ್ತಿಯಲ್ಲಿ ಮನೆ ಇಲ್ಲದ 30ಕ್ಕೂ ಹೆಚ್ಚು ಕುಟುಂಬಗಳಿಗೆ ಸ್ಲಂ ಬೋರ್ಡ್ ಯೋಜನೆಯಡಿ ವಸತಿ ಕಲ್ಪಿಸಲು ಹಾಗೂ ಇಂದಿರಾ ಕ್ಯಾಂಟೀನ್ ಆಹಾರ ಪೂರೈಕೆ ಒಪ್ಪಂದಗಳ ಅವಧಿ ಮುಗಿಯುವ ಮುನ್ನವೇ ಪಾರದರ್ಶಕವಾಗಿ ಹೊಸ ಟೆಂಡರ್ ಮುಗಿಸಲು ತಿಳಿಸಿದರು. ಅಂತಿಮವಾಗಿ, ಎಸ್.ಸಿ.ಎಸ್.ಪಿ/ಟಿ.ಎಸ್.ಪಿ ಅನುದಾನವನ್ನು ಅನಗತ್ಯ ಕಾಮಗಾರಿಗಳಿಗೆ ಪೋಲು ಮಾಡದೆ ನೌಕರರ ವಸತಿ ಹಾಗೂ ಮೂಲಭೂತ ಅಗತ್ಯಗಳಿಗೆ ಬಳಸಬೇಕೆಂದು ಸೂಚಿಸಿದ ಜಿಲ್ಲಾಧಿಕಾರಿಗಳು, ಕರ್ತವ್ಯದಲ್ಲಿ ಅಶಿಸ್ತು ತೋರಿದರೆ ಶಿಸ್ತುಕ್ರಮ ಜರುಗಿಸಲಾಗುವುದು ಎಂದರು.

ಸಭೆಯಲ್ಲಿ ಮಹಾನಗರ ಪಾಲಿಕೆ ಆಯುಕ್ತ ಅವಿನಾಶ ಶಿಂಧೆ, ಜಿಲ್ಲಾ ಸಮಾಜ ಕಲ್ಯಾಣ ಜಂಟಿ ನಿರ್ದೇಶಕಿ ಪ್ರೀತಿ ಚಂದ್ರಶೇಖರ್, ಜಿಲ್ಲಾ ಪಂಚಾಯತ್ ಮುಖ್ಯ ಯೋಜನಾಧಿಕಾರಿ (ಪ್ರಭಾರ) ಮಧುಮತಿ, ಪ್ರೊಜೆಕ್ಟರ್ ಯೋಜನಾ ನಿರ್ದೇಶಕ ಜಗದೇವಪ್ಪ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಉಪನಿರ್ದೇಶಕ ರಾಜಕುಮಾರ್ ರಾಠೋಡ ಪ್ರವಾಸೋದ್ಯಮ ಇಲಾಖೆ ಉಪ ನಿರ್ದೇಶಕ ಬೇಬಿಮುಗೇರ್ ಸೇರಿದಂತೆ ಜಿಲ್ಲಾಮಟ್ಟದ ಅಧಿಕಾರಿಗಳು ಸಭೆಯಲ್ಲಿ ಭಾಗವಹಿಸಿದ್ದರು.

ಭೂಮಾಪಕರ, ಗ್ರಾಮ ಆಡಳಿತಾಧಿಕಾರಿಗಳ ನೇಮಕಾತಿಗೆ ಪರೀಕ್ಷೆ

ಬಾಗಲಕೋಟೆ : ಸೆಪ್ಟೆಂಬರ 30 ಜಿಲ್ಲೆಯಲ್ಲಿ ಅಕ್ಟೋಬರ 2 ರಂದು ಭೂಮಾಪಕರ ಹಾಗೂ 4 ರಂದು ಗ್ರಾಮ ಆಡಳಿತಾಧಿಕಾರಿಗಳ ನೇಮಕಾತಿಗೆ ಸಂಬಂಧಿಸಿದಂತೆ ಪರೀಕ್ಷೆಗಳು ನಡೆಯಲಿವೆ ಎಂದು ಪ್ರಭಾರಿ ಅಪರ ಜಿಲ್ಲಾಧಿಕಾರಿ ಕ್ಯಾಪ್ಟನ್ ಮಹೇಶ ಮಾಲಗಿತ್ತಿ ತಿಳಿಸಿದರು.

ಜಿಲ್ಲಾಧಿಕಾರಿಗಳ ಕಚೇರಿಯ ಆಡಿಟೋರಿಯಂ ಹಾಲ್‌ನಲ್ಲಿ ಬುಧವಾರ ಭೂಮಾಪಕರ ಹಾಗೂ ಗ್ರಾಮ ಆಡಳಿತಾಧಿಕಾರಿಗಳ ನೇಮಕಾತಿ ಪರೀಕ್ಷೆಯ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು ಅಕ್ಟೋಬರ 2 ರಂದು ಭೂಮಾಪಕರ ಹಾಗೂ ಅಕ್ಟೋಬರ 4 ರಂದು ಗ್ರಾಮ ಆಡಳಿತಾಧಿಕಾರಿಗಳ ನೇಮಕಾತಿ ಪರೀಕ್ಷೆಗಳು ನಡೆಯಲಿವೆ. ಭೂಮಾಪಕರ ನೇಮಕಾತಿ ಪರೀಕ್ಷೆಗೆ ಒಟ್ಟು 5,935 ಅಭ್ಯರ್ಥಿಗಳು ಹಾಜರಾಗಲಿದ್ದು, ಬಾಗಲಕೋಟೆ ನಗರದಲ್ಲಿ 14 ಪರೀಕ್ಷಾ ಕೇಂದ್ರಗಳನ್ನು ಸ್ಥಾಪಿಸಲಾಗಿದೆ ಎಂದರು.

ಗ್ರಾಮ ಆಡಳಿತಾಧಿಕಾರಿಗಳ ನೇಮಕಾತಿ ಪರೀಕ್ಷೆಗೆ ಒಟ್ಟು 27,600 ಅಭ್ಯರ್ಥಿಗಳು ಪರೀಕ್ಷೆ ಬರೆಯಲಿದ್ದಾರೆ. ಇದಕ್ಕಾಗಿ ಜಿಲ್ಲೆಯ ವಿವಿಧ ತಾಲೂಕುಗಳಲ್ಲಿ ಒಟ್ಟು 54 ಪರೀಕ್ಷಾ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ಬಾಗಲಕೋಟೆ ನಗರದಲ್ಲಿ 24, ಬಾದಾಮಿಯಲ್ಲಿ 2, ಬೀಳಗಿಯಲ್ಲಿ 5, ಹುನಗುಂದದಲ್ಲಿ 2, ಇಳಕಲ್ಲಿನಲ್ಲಿ 1, ಜಮಖಂಡಿಯಲ್ಲಿ 9, ಮುಧೋಳದಲ್ಲಿ 5, ರಬಕವಿ-ಬನಹಟ್ಟಿಯಲ್ಲಿ 5 ಹಾಗೂ ತೇರದಾಳದಲ್ಲಿ 1 ಪರೀಕ್ಷಾ ಕೇಂದ್ರಗಳನ್ನು ಸ್ಥಾಪಿಸಲಾಗಿದೆ ಎಂದು ತಿಳಿಸಿದರು.

ಈ ಎರಡು ಹುದ್ದೆಗಳ ನೇಮಕಾತಿ ಪರೀಕ್ಷೆಗಳನ್ನು ಯಾವುದೇ ಗೊಂದಲ, ಲೋಪಗಳಿಗೆ ಅವಕಾಶವಿಲ್ಲದಂತೆ ಸುಸೂತ್ರವಾಗಿ ಹಾಗೂ ಪಾರದರ್ಶಕವಾಗಿ ನಡೆಸಲು ಜಿಲ್ಲಾಡಳಿತದಿಂದ ಅಗತ್ಯ ಸಿದ್ದತೆಗಳನ್ನು ಕೈಗೊಳ್ಳಲಗಿದೆ. ಪರೀಕ್ಷಾ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಹಾಗೂ ಭದ್ರತೆ ಕಾಪಾಡುವ ಉದ್ದೇಶದಿಂದ ಪರೀಕ್ಷಾ ಕೇಂದ್ರಗಳಲ್ಲಿ ವೆಬ್‌ಕಾಸ್ಟಿಂಗ್ ವ್ಯವಸ್ಥೆ ಕಲ್ಪಿಸಲಾಗಿದೆ. ಪರೀಕ್ಷಾ ಕೇಂದ್ರಗಳಲ್ಲಿನ ವ್ಯವಸ್ಥೆಯನ್ನು ಜಿಲ್ಲಾ ಮಟ್ಟದಲ್ಲಿ ಮೇಲ್ವಿಚಾರಣೆ ಮಾಡಲು ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗಿದೆ ಎಂದರು.

ಗ್ರಾಮ ಆಡಳಿತಾಧಿಕರಿ ನೇಮಕಾತಿ



ಪರೀಕ್ಷೆಗೆ ಜಿಲ್ಲೆಯ ವಿವಿಧ ತಾಲೂಕುಗಳಿಂದ ಹೆಚ್ಚಿನ ಸಂಖ್ಯೆಯಲ್ಲಿ ಅಭ್ಯರ್ಥಿಗಳು ಹಾಜರಾಗಲಿರುವ ಹಿನ್ನಲೆಯಲ್ಲಿ ಪರೀಕ್ಷಾ ಕೇಂದ್ರಗಳಿಗೆ ತೆರಳಲು ಅಗತ್ಯ ಸಾರಿಗೆ ವ್ಯವಸ್ಥೆ ಕಲ್ಪಿಸುವ ಕುರಿತು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚನೆ ನೀಡಿದರು. ಪರೀಕ್ಷಾ ಕೇಂದ್ರಗಳಲ್ಲಿ ಅಗತ್ಯ ಮೂಲಸೌಕರ್ಯ, ಅಭ್ಯರ್ಥಿಗಳಿಗೆ ಕುಡಿಯುವ ನೀರು, ಶೌಚಾಲಯ, ವಿದ್ಯುತ್ ಸೇರಿದಂತೆ ಅಗತ್ಯ ಸೌಲಭ್ಯಗಳನ್ನು ಸಮರ್ಪಕವಾಗಿ ಕಲ್ಪಿಸುವಂತೆ ಸೂಚಿಸಿದರು. ಪರೀಕ್ಷಾ ಕೇಂದ್ರಗಳಲ್ಲಿ ಹೆಸ್ಕಾಂ ವತಿಯಿಂದ ನಿರಂತರ ವಿದ್ಯುತ್ ಸರಬರಾಜು ಕಲ್ಪಿಸಲಿ ತಿಳಿಸಿದರು.

ಪರೀಕ್ಷಾ ಕೇಂದ್ರಗಳಲ್ಲಿ ಸಿಸಿಟಿವಿ ವ್ಯವಸ್ಥೆ, ಅಭ್ಯರ್ಥಿಗಳ ಫ್ರಿಸ್ಕಿಂಗ್, ಕ್ಯೂಆರ್ ಕೋಡ ಆಧಾರಿತ ಗುರುತು ಪರಿಶೀಲನೆ, ಪೊಲೀಸ್ ಬಂದೋಬಸ್ತಗಾಗಿ ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಿದರು. ಪರೀಕ್ಷಾ ಕೇಂದ್ರಗಳ ಸುತ್ತಮುತ್ತ ಝುರಾಕ್ಸ ಕೇಂದ್ರಗಳು, ಸೈಬರ್ ಸೆಂಟರ್ ಹಾಗೂ ಇತರೆ ಅನುಮಾನಾಸ್ಪದ ಚಟುವಟಿಕೆಗಳ ಮೇಲೆ ನಿಗಾವಹಿಸಲು ಹಾಗೂ ಕಲಂ 163 ರಡಿ ಹೊರಡಿಸಲಾದ ಆದೇಶವನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಲು ಪೊಲೀಸ್ ಇಲಾಖೆಗೆ ಸೂಚಿಸಿದರು. ಕೆಲವು ಸಮುದಾಯದ ವಿದ್ಯಾರ್ಥಿಗಳು ಧಾರ್ಮಿಕ ಉಡುಪುಗಳನ್ನು ಧರಿಸಿಕೊಂಡು ಪರೀಕ್ಷೆ ಬರೆಯಲು ಇಚ್ಚಿಸಿದಲ್ಲಿ ಪರೀಕ್ಷಾ ಆರಂಭಕ್ಕೆ 2 ಗಂಟೆ ಮೊದಲು ಪರೀಕ್ಷಾ ಕೇಂದ್ರದ ವಸ್ತ್ರಸಂಹಿತೆ ಅಧಿಕಾರಿ ಮುಂದೆ ಹಾಜರಾಗಬೇಕು ಎಂದರು.

ಸಭೆಯಲ್ಲಿ ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಪುಂಡಲೀಕ ಕಾಂಬಳೆ, ಸೇರಿದಂತೆ ಪರೀಕ್ಷಾ ಕಾರ್ಯಕ್ಕೆ ನೇಮಕಗೊಂಡ ಉಪ ಮುಖ್ಯ ಅಧೀಕ್ಷಕರು, ಜಾಗೃತದಳದ ಸದಸ್ಯರು ಉಪಸ್ಥಿತರಿದ್ದರು.

ಪರೀಕ್ಷೆಯಲ್ಲಿ ನಿಷೇಧಿತ ವಸ್ತುಗಳು

ಎಲೆಕ್ಟ್ರಾನಿಕ್ಸ್ ವಸ್ತುಗಳಾದ ಮೊಬೈಲ್‌ಫೋನ್, ಸ್ಮಾರ್ಟ ಕೈಗಡಿಯಾರ, ಎಲೆಕ್ಟ್ರಾನಿಕ್ ಕೈಗಡಿಯಾರ, ಬ್ಲೂಟೂತ್, ಮೈಕ್ರೊ-ಇಯರ್‌ಫೋನ್, ಅನುಮತಿಸದ ಹೊರತು ಕ್ಯಾಲ್ಕುಲೇಟರಗಳು, ಪುಸ್ತಕಗಳು ಮತ್ತು ಲಿಖಿತ ಟಿಪ್ಪಣಿಗಳು, ಅನಧಿಕೃತ ಲೇಖನ ಸಾಮಗ್ರಿಗಳು, ಚೀಲಗಳು, ನಿಷೇಧಿತ ಆಭರಣಗಳು, ಎಲೆಕ್ಟ್ರಾನಿಕ್ ಪರಿಕರಗಳು ಮತು ಸಂವಹನ ಸಾಮರ್ಥ್ಯವಿರುವ ಯಾವುದೇ ಸಾಧನ.

ಒಂದನೇಯ ಪುಟದಿಂದ

ಕ್ರಿಮಿನಲ್ ಪ್ರಕರಣ ದಾಖಲಿಸಲು ಆಗ್ರಹ: ಸಿಎಂ

ಗಕ್ಕೆ ಸಹಕಾರ, ಪ್ರೋತ್ಸಾಹ ಕೊಟ್ಟಿದ್ದೇವೆ. ಈಗಾಗಲೇ ನಮ್ಮ ಪಕ್ಷದವರು, ಬಿಜೆಪಿ-ಜೆಡಿಎಸ್ ನವರು ಬಿಎಲ್‌ಎ-2 ನೇಮಕ ಮಾಡಿದ್ದಾರೆ. ಒಂದು ಕೋಟಿ ಮತ ತೆಗೆದಿದ್ದಾರೆ. ಅರ್ಹ ಮತದಾರರ ಫಾರಂ 7 ನೀಡಿ ಮತಪಟ್ಟಿಯಿಂದ ಹೆಸರು ತೆಗೆಸಿಕೊಳ್ಳುವ ಕೆಲಸ ನಡೆದಿದೆ. ಬಾಲ್ಕಿ, ನರಸಿಂಹರಾಜ ಸೇರಿ ಹಲವು ಕ್ಷೇತ್ರಗಳಲ್ಲಿ ಈ ರೀತಿ ಅಕ್ರಮಗಳು ನಡೆದಿವೆ. ಬಿಜೆಪಿ ಕಾರ್ಯಕರ್ತರೇ ಫಾರಂ 7 ಗಳನ್ನು ನೀಡಿದ್ದಾರೆ.

ಹಿರಿಯ ನಾಗರಿಕರನ್ನು ಗೌರವಿಸುವುದು ಪ್ರತಿಯೊಬ್ಬ ನಾಗರಿಕನ ಕರ್ತವ್ಯವಾಗಿದೆ

ಪಡೆಯಬಹುದು. ಹಿರಿಯ ನಾಗರಿಕರು ಯಾವುದೇ ರೀತಿಯ ಅನ್ಯಾಯಕ್ಕೆ ಒಳಗಾದಾಗ ಮುಕ್ತವಾಗಿ ತಮ್ಮ ಕಚೇರಿಗೆ ಅಥವಾ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳ ಆಫೀಸ್ ಭೇಟಿ ನೀಡಿ ಪರಿಹಾರ ಪಡೆದುಕೊಳ್ಳಬಹುದಾಗಿದೆ ಎಂದರು.

ಈ ವೇಳೆ ನಿವೃತ್ತ ಸರ್ಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷರಾದ ಡಾ.ಶಂಕರಗೌಡ ಅವರು ಮಾತನಾಡಿ, 60 ವರ್ಷ ಮೇಲ್ಪಟ್ಟ ಎಲ್ಲಾ ಹಿರಿಯ ನಾಗರಿಕರ ಆರೋಗ್ಯ ಮತ್ತು ರಕ್ಷಣೆಗಾಗಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಕಾನೂನು ಅರಿವು ಕಾರ್ಯಕ್ರಮಗಳು, ಡೇ ಕೇರ್ ಸೆಂಟರ್‌ಗಳು ಮತ್ತು ಸುರಕ್ಷಾ ಸಂಸ್ಥೆಗಳ ಮೂಲಕ ಹಲವು ಸೌಲಭ್ಯಗಳನ್ನು ಕಲ್ಪಿಸುತ್ತಿವೆ. ಅಲ್ಲದೆ ಹಿರಿಯ ನಾಗರಿಕರ ಕಲ್ಯಾಣ ಸಮಿತಿಯ ನೇತೃತ್ವದಲ್ಲಿ ಕಾನೂನು ನೆರವು, ಪಿಂಚಣಿ ಅಥವಾ ಇತರೆ ಯಾವುದೇ ಸಮಸ್ಯೆಗಳಿದ್ದರೂ ಅವುಗಳನ್ನು ಸಮಾಧಾನಕರವಾಗಿ ಬಗೆಹರಿಸಿ ಎಲ್ಲರಿಗೂ ಸೂಕ್ತ ಅನುಕೂಲ ಕಲ್ಪಿಸಲಾಗುತ್ತಿದೆ ಎಂದರು.

ಈ ವೇಳೆ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಹಿರಿಯ ಸಹಾಯಕ ನಿರ್ದೇಶಕರಾದ ಡಾ.ಜಿ.ಸುರೇಶ ಅವರು ಮಾತನಾಡಿ, ಹಿರಿಯ ನಾಗರಿಕರು ನಮ್ಮ ಕುಟುಂಬದ ಕಣ್ಣುಗಳಿದ್ದಂತೆ ಅವರು ಸಮಾಜವನ್ನು ಒಳ್ಳೆಯ ದಾರಿಯಲ್ಲಿ ನಡೆಸಲು ಪ್ರಮುಖ ಪಾತ್ರ ವಹಿಸುತ್ತಾರೆ. ಹಿರಿಯ ನಾಗರಿಕರು ತಂದೆ-ತಾಯಿಗಳಾಗಿ, ಅಜ್ಜ-ಅಜ್ಜಿಯಾಗಿ ಕುಟುಂಬಕ್ಕೆ ಮಾರ್ಗದರ್ಶನ ನೀಡುತ್ತಾ ಬಂದಿದ್ದಾರೆ. ಇತ್ತೀಚಿನ ದಿನಗಳಲ್ಲಿ ಹಿರಿಯ ನಾಗರಿಕರ ಕಡೆಗೆ ನಿರ್ಲಕ್ಷ್ಯ ಹೆಚ್ಚಾಗುತ್ತಿದ್ದು, ಅವರ ಹಕ್ಕುಗಳು ಹಾಗೂ ಯೋಗಕ್ಷೇಮದ ಬಗ್ಗೆ ಕಾಳಜಿ ವಹಿಸುವುದು ಪ್ರತಿಯೊಬ್ಬರ ಕರ್ತವ್ಯವಾಗಿದೆ. ಸರ್ಕಾರದಿಂದ ಹಿರಿಯ ನಾಗರಿಕರಿಗಾಗಿ ಅನೇಕ ಯೋಜನೆಗಳು ಮತ್ತು ಸೌಲಭ್ಯಗಳಿದ್ದರೂ, ಅವುಗಳು ಅರ್ಹರಿಗೆ ತಲುಪುವಲ್ಲಿ ಇನ್ನಷ್ಟು ಜಾಗೃತಿ ಮೂಡಿಸಬೇಕಿದೆ ಎಂದರು.

ಈ ವೇಳೆ ವಿಶ್ವ ಹಿರಿಯ ನಾಗರಿಕರ ದಿನಾಚರಣೆಯ ಅಂಗವಾಗಿ ಹಮ್ಮಿಕೊಳ್ಳಲಾಗಿದ್ದ ವಿವಿಧ ಸ್ಪರ್ಧೆಯಲ್ಲಿ ವಿಜೇತರಾದ ಹಿರಿಯ ನಾಗರಿಕರಿಗೆ ಸನ್ಮಾನಿಸಿ ಗೌರವಿಸಲಾಯಿತು.

ಇದೇ ಸಂದರ್ಭದಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪ ನಿರ್ದೇಶಕಿ ಶರಣಮ್ಮ, ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿ ಸರಸ್ವತಿ, ಮಹಾನಗರ ಪಾಲಿಕೆಯ ಪರಿಸರ ವಿಭಾಗದ ಸಹಾಯಕ ಅಭಿಯಂತರರಾದ ಜೈಪಾಲ ರೆಡ್ಡಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ವೆಂಕಟೇಶ, ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಕುಮಾರ್, ಸಮಾಜ ಸೇವಕರಾದ ಸೋಮನಾಥ ಭಂಡಾರಿ ಸೇರಿದಂತೆ ಹಿರಿಯ ನಾಗರಿಕರು, ವಿವಿಧ ಸಂಘ-ಸಸ್ಥೆಯ ಮುಖಂಡರು, ಮಹಿಳೆಯರು ಇದ್ದರು.

ಗಿರಿಜವ್ವ ಅಕ್ಕಿ ಅವರು ಕಾರ್ಯಕ್ರಮವನ್ನು ನಿರೂಪಿಸಿದರು. ದಂಡಪ್ಪ ಬಿರಾದಾರ್ ಅವರು ಕಾರ್ಯಕ್ರಮದಲ್ಲಿ ಸ್ವಾಗತಿಸಿ, ವಂದಿಸಿದರು.

ತುಂಗಭದ್ರಾ, ನೀರಾವರಿ ಕಾರ್ಮಿಕರ ಬೇಡಿಕೆ: ಸಚಿವರೊಂದಿಗೆ ಸಭೆ ಯಶಸ್ವಿ

ಎರಡು ದಿನಗಳ ಕಾಲ ಸಂಜೆ 4.30ರಿಂದ ಭಜನೆ, ಉಪನ್ಯಾಸ, ದಾಸವಾಣಿ, ಆಶೀರ್ವಚನ ಹಾಗೂ ಸನ್ಮಾನ-ಪ್ರಶಸ್ತಿ ಪ್ರದಾನ ಸೇರಿದಂತೆ ವಿವಿಧ ಕಾರ್ಯಕ್ರಮಗಳು ಜರುಗಲಿವೆ ಎಂದರು.

ಅ.3ರಂದು ವಿಧಾನ ಪರಿಷತ್ ಸದಸ್ಯ ಹಾಗೂ ಮಾಜಿ ಸಚಿವ ಎನ್.ಎಸ್. ಬೋಸರಾಜ ಕಾರ್ಯಕ್ರಮ ಉದ್ಘಾಟಿಸಲಿದ್ದು, ಸಂಸದ ಜಿ. ಕುಮಾರ ನಾಯಕ್, ಶಾಸಕ ಡಾ. ಶಿವರಾಜ ಪಾಟೀಲ ಸೇರಿದಂತೆ ಗಣ್ಯರು ಭಾಗವಹಿಸಲಿದ್ದಾರೆ.

ಭಕ್ತರು, ಸಾಹಿತ್ಯಾಸಕ್ತರು ಹಾಗೂ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳುವಂತೆ ಶೇಷಗಿರಿದಾಸ ಮನವಿ ಮಾಡಿದರು.

ಸುದ್ದಿಗೋಷ್ಠಿಯಲ್ಲಿ ಮುರುಳಿಧರ್ ಕುಲಕರ್ಣಿ ಇದ್ದರು.

ತುಂಗಭದ್ರಾ, ನೀರಾವರಿ ಕಾರ್ಮಿಕರ ಬೇಡಿಕೆ: ಸಚಿವರೊಂದಿಗೆ ಸಭೆ ಯಶಸ್ವಿ

ಸಮಸ್ಯೆಗಳ ಪರಿಹಾರಕ್ಕೆ ಸಹಕಾರ ನೀಡುವುದಾಗಿ ತಿಳಿಸಿದರು.

ಗುತ್ತಿಗೆ ಹಾಗೂ ಟೆಂಡರ್ ವ್ಯವಸ್ಥೆಯಿಂದ ಉಂಟಾಗುತ್ತಿರುವ ವೇತನ ವಿಳಂಬ, ಪಿಎಫ್-ಇಎಸ್‌ಐ ಸಮಸ್ಯೆ ಮತ್ತು ಆಡಳಿತಾತ್ಮಕ ಹೊರೆಗಳನ್ನು ಸಭೆಯಲ್ಲಿ ಪ್ರಸ್ತಾಪಿಸಲಾಯಿತು. ಕಾನೂನು ಮತ್ತು ಸರ್ಕಾರದ ನಿಯಮಗಳಿಗೆ ಅನುಗುಣವಾಗಿ ನೇರ ವೇತನ ಪಾವತಿ ವ್ಯವಸ್ಥೆ ಜಾರಿಗೊಳಿಸುವ ಸಾಧ್ಯತೆ ಪರಿಶೀಲಿಸಬೇಕು ಎಂದು ಕಾರ್ಮಿಕರ ಪ್ರತಿನಿಧಿಗಳು ಮನವಿ ಮಾಡಿದರು.

ಸಭೆಯಲ್ಲಿ ಕರ್ನಾಟಕ ನೀರಾವರಿ ನಿಗಮದ ವ್ಯವಸ್ಥಾಪಕ ನಿರ್ದೇಶಕ ಬಿ.ಆರ್. ರಾಥೋಡ್, ಅಧೀಕ್ಷಕ ಅಭಿಯಂತರರಾದ ಶ್ರೀನಿವಾಸ ಮಲ್ಲಿಗೆವಾಡ, ಸತ್ಯನಾರಾಯಣ ಶೆಟ್ಟಿ, ಕಾರ್ಯಪಾಲಕ ಅಭಿಯಂತರರಾದ ನಾಗನಾಥ, ಬಸಪ್ಪ ಜನಕರ್ ಸೇರಿದಂತೆ ಅಧಿಕಾರಿಗಳು ಹಾಗೂ ಕಾರ್ಮಿಕರ ಪ್ರತಿನಿಧಿಗಳು ಭಾಗವಹಿಸಿದ್ದರು.

ತುಂಗಭದ್ರಾ ನೀರಾವರಿ ಕಾರ್ಮಿಕರ ಸಂಘದ ಅಧ್ಯಕ್ಷ ಕೆ. ನಾಗಲಿಂಗಸ್ವಾಮಿ, ಎಐಸಿಸಿಟಿಯು ರಾಜ್ಯ ಪ್ರಧಾನ ಕಾರ್ಯದರ್ಶಿ ಮೈತ್ರೇಯಿ ಕೃಷ್ಣನ್, ರಾಜ್ಯ ಸಹ ಕಾರ್ಯದರ್ಶಿ ನಾಗರಾಜ ಪೂಜಾರ, ಸಂಘದ ಪ್ರಧಾನ ಕಾರ್ಯದರ್ಶಿ ಎಂ. ಬಸವರಾಜ, ಸೇರಿದಂತೆ ಅಜಿಜ್ ಜಾಗೀರದಾರ್, ಶರಣಬಸವ, ಜಡೆ ವೆಂಕಟೇಶ್, ಹುಚ್ಚಯ್ಯಸ್ವಾಮಿ, ಜಲೀಲ್ ಪಾಷಾ, ಶೇಖಪ್ಪ, ಚಂದು ಸಾಬ್, ಗಾದಿಲಿಂಗಪ್ಪ, ಜಡೆಪ್ಪ, ಆನಂದ ಮತ್ತಿತರರು ಉಪಸ್ಥಿತರಿದ್ದರು.

ಸಭೆಯಲ್ಲಿ ನಡೆದ ಚರ್ಚೆಯ ಹಿನ್ನೆಲೆಯಲ್ಲಿ ಸರ್ಕಾರದ ಭರವಸೆಗಳು ಶೀಘ್ರ ಆಡಳಿತಾತ್ಮಕ ಕ್ರಮಗಳು ಹಾಗೂ ಆದೇಶಗಳ ರೂಪದಲ್ಲಿ ಜಾರಿಯಾಗಬೇಕು. ದೀರ್ಘಕಾಲದಿಂದ ಸೇವೆ ಸಲ್ಲಿಸುತ್ತಿರುವ ಕಾರ್ಮಿಕರ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ಕಲ್ಪಿಸಬೇಕು ಎಂದು ತುಂಗಭದ್ರಾ ನೀರಾವರಿ ಕಾರ್ಮಿಕರ ಸಂಘ (ಎಐಸಿಸಿಟಿಯು) ಒತ್ತಾಯಿಸಿದೆ.

ತುಂಗಭದ್ರಾ, ನೀರಾವರಿ ಕಾರ್ಮಿಕರ ಬೇಡಿಕೆ: ಸಚಿವರೊಂದಿಗೆ ಸಭೆ ಯಶಸ್ವಿ

ನಗರದ ಕೃಷಿ ತಾಂತ್ರಿಕ ಮಹಾವಿದ್ಯಾಲಯದಿಂದ ಆಹಾರ ನಷ್ಟ ಮತ್ತು ಆಹಾರ ಪೋಲು ತಡೆಗೆ ಅಂತರಾಷ್ಟ್ರೀಯ ಜಾಗೃತಿ ಜಾಥಾ- 2026 ವನ್ನು ದಿನಾಂಕ 29-09-2026 ರಂದು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ರಾಯಚೂರಿನ ಕೃಷಿ ತಾಂತ್ರಿಕ ಮಹಾವಿದ್ಯಾಲಯವು ಭಾರತೀಯ ಕೃಷಿ ಇಂಜಿನೀಯರ್‌ಗಳ ಸಂಘ, ರಾಯಚೂರು ಘಟಕದ (,) ಸಹಯೋಗದೊಂದಿಗೆ ''ಆಹಾರ ನಷ್ಟ ಮತ್ತು ಆಹಾರ ವ್ಯರ್ಥ ಕುರಿತು ಅಂತರಾಷ್ಟ್ರೀಯ ಜಾಗೃತಿ ಕಾರ್ಯಕ್ರಮ'' ( ) ವನ್ನು ಹಮ್ಮಿಕೊಳ್ಳಲಾಗಿತ್ತು. ಈ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಘಟಕದ ಅಧ್ಯಕ್ಷರಾದ ಡಾ. ಉದಯಕುಮಾರ್ ನಿಡೋಣಿಯವರು, ಆಹಾರ ನಷ್ಟ ಮತ್ತು ಆಹಾರ ವ್ಯರ್ಥವು ಆಹಾರ ಭದ್ರತೆ, ರೈತರ ಆದಾಯ, ಪರಿಸರ ಹಾಗೂ ದೇಶದ ಆರ್ಥಿಕತೆಗೆ ಪರಿಣಾಮ ಬೀರುವ ಪ್ರಮುಖ ಸಮಸ್ಯೆಯಾಗಿದೆ. ಹೊಲದಿಂದ ಗ್ರಾಹಕರ ತಟ್ಟೆಯವರೆಗೆ ಆಹಾರದ ಪ್ರತಿಯೊಂದು ಹಂತದಲ್ಲೂ ನಷ್ಟವನ್ನು ಕಡಿಮೆ ಮಾಡುವುದು ಮತ್ತು ಬಳಕೆಯಾಗದೆ ಉಳಿದ ಆಹಾರವನ್ನು ವ್ಯರ್ಥವಾಗದಂತೆ ತಡೆಯಬೇಕು. ಇದಕ್ಕಾಗಿ ಸುಧಾರಿತ ಕೊಯ್ಲು ವಿಧಾನಗಳು, ವೈಜ್ಞಾನಿಕ ಸಂಗ್ರಹಣೆ, ಶೀತ ಸರಪಳಿ ವ್ಯವಸ್ಥೆ, ಸೂಕ್ತ ಪ್ಯಾಕೇಜಿಂಗ್ ಮತ್ತು ಪರಿಣಾಮಕಾರಿ ಸಾರಿಗೆ ವ್ಯವಸ್ಥೆಗಳನ್ನು ಅಳವಡಿಸಿಕೊಳ್ಳಬೇಕು. ಮನೆಗಳು, ಹೋಟೆಲ್‌ಗಳು, ಶಾಲೆಗಳು ಮತ್ತು ಸಾರ್ವಜನಿಕ ಸಮಾರಂಭಗಳಲ್ಲಿ ಅಗತ್ಯವಿರುವಷ್ಟು ಮಾತ್ರ ಆಹಾರವನ್ನು ತಯಾರಿಸಿ, ಉಳಿದ ಆಹಾರವನ್ನು ಸಮರ್ಪಕವಾಗಿ ಸಂಗ್ರಹಿಸಿ ಅಗತ್ಯವಿರುವವರಿಗೆ ಹಂಚಬೇಕು. ಹಾಳಾಗುವ ಆಹಾರವನ್ನು ಆಹಾರ ಉಳಿಸಿ ರೈತನ ಶ್ರಮಕ್ಕೆ ಗೌರವ ನೀಡಿ ಪರಿಸರ ಸಂರಕ್ಷಿಸುವ ಮನೋಭಾವವನ್ನು ಪ್ರತಿಯೊಬ್ಬರೂ ಬೆಳೆಸಿಕೊಳ್ಳುವುದರಿಂದ ಆಹಾರ ನಷ್ಟ ಮತ್ತು ವ್ಯರ್ಥವನ್ನು ಗಣನೀಯವಾಗಿ ಕಡಿಮೆ ಮಾಡಿ ಸುಸ್ಥಿರ ಆಹಾರ ವ್ಯವಸ್ಥೆಯನ್ನು ನಿರ್ಮಿಸಬಹುದು ಎಂದು ಹೇಳಿದರು.

ವಿದ್ಯಾರ್ಥಿಗಳು ಸೇರಿದಂತೆ ಎಲ್ಲಾ ಸಿಬ್ಬಂದಿ ವರ್ಗದವರು ಆಹಾರ ನಷ್ಟ ಮತ್ತು ಆಹಾರ ಪೋಲು ತಡೆಗೆ ಅನುಸರಿಸಬೇಕಾದ ಕ್ರಮಗಳ ಬಗ್ಗೆ ದೃಢ ನಿಶ್ಚಯದ ಪ್ರತಿಜ್ಞಾವಿಧಿಯನ್ನು ಪ್ರಾಧ್ಯಾಪಕರಾದ ಡಾ. ಪಿ.ಎಫ್. ಮಠದ ಅವರು ಬೋಧಿಸಿದರು. ವಿದ್ಯಾರ್ಥಿಗಳು ಸೇರಿದಂತೆ ಮಹಾವಿದ್ಯಾಲಯದ ಸಿಬ್ಬಂದಿ ವರ್ಗದವರು ಆಹಾರ ನಷ್ಟ ಮತ್ತು ಆಹಾರ ವ್ಯರ್ಥ ಕುರಿತು ಕೈಫಲಕಗಳನ್ನು ಹಿಡಿದು ಕಾಲ್ನಡಿಗೆ ಜಾಥಾವನ್ನು ವಿಶ್ವವಿದ್ಯಾಲಯದ ಆವರಣದಲ್ಲಿ ನಡೆಸಿ, ಘೋಷಣೆಗಳ ಮೂಲಕ ಆವರಣದ ಎಲ್ಲಾ ಜನಸಮುದಾಯಕ್ಕೆ ಜಾಗೃತಿ ಮೂಡಿಸಿದರು.

ಪತ್ರಿಕೆ ಓದುವ ಹವ್ಯಾಸ ಬೆಳಸಿಕೊಳ್ಳಿ

ಶಿಕ್ಷಣ ಪರಿಶ್ರಮ ಹಿರಿಮೆಗೆ ಮನ್ನಣೆ: ಪ್ರಶಸ್ತಿ ಪ್ರದಾನ, ಕೃತಿ ಬಿಡುಗಡೆ

ಬಾಗಲಕೋಟೆ ಶಿಕ್ಷಕ ಎಂದಿಗೂ ಶಿಕ್ಷಕನಾಗಿಯೇ ಇರುತ್ತಾನೆ. ಶಿಕ್ಷಕನಿಗೆ ನಿವೃತ್ತಿಯೆಂಬುದಿಲ್ಲ. ನೌಕರಿಯಿಂದ ನಿವೃತ್ತಿಯಾಗಬಹುದು, ಆದರೆ ಕಲಿಕೆಯಿಂದ ನಿವೃತ್ತಿಯಾಗಲು ಸಾಧ್ಯವಿಲ್ಲ. ಗುರುವಿನ ಸೇವೆ ನಿರಂತರವಾಗಿದ್ದು, ಆತ್ಮತೃಪ್ತಿಯೇ ಶಿಕ್ಷಣ ಪರಿಶ್ರಮದ ಹಿರಿಮೆಗೆ ದೊರೆಯುವ ನಿಜವಾದ ಮನ್ನಣೆ ಎಂದು ಬಿ.ವಿ.ವಿ. ಸಂಘದ ಹಿರಿಯ ಸಲಹೆಗಾರ್ತಿ ಮೀನಾ ಚಂದಾವರಕರ ಹೇಳಿದರು.



ಬಸವೇಶ್ವರ ವೀರಶೈವ ವಿದ್ಯಾವರ್ಧಕ ಸಂಘ, ಅಪರ ಆಯುಕ್ತರ ಕಚೇರಿ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಧಾರವಾಡ, ಉಪನಿರ್ದೇಶಕರ ಕಚೇರಿ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಬಾಗಲಕೋಟೆ ಹಾಗೂ ಡಾ. ಎಚ್.ಎಫ್. ಕಟ್ಟೀಮನಿ ಪ್ರೌಢ ಶಿಕ್ಷಣ ಪ್ರತಿಷ್ಠಾನ, ಧಾರವಾಡ ಇವರ ಸಂಯುಕ್ತ ಆಶ್ರಯದಲ್ಲಿ ಬಿ.ವಿ.ವಿ. ಸಂಘದ ಮಿನಿ ಸಭಾಭವನದಲ್ಲಿ ಬುಧವಾರ ಆಯೋಜಿಸಿದ್ದ 'ಶಿಕ್ಷಣ ಪರಿಶ್ರಮ ಹಿರಿಮೆಗೆ ಮನ್ನಣೆ' ಪ್ರಶಸ್ತಿ ಪ್ರದಾನ ಹಾಗೂ ಕೃತಿ ಬಿಡುಗಡೆ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು.

ಬಿ.ವಿ.ವಿ. ಸಂಘವು ಒಂದು ವಿಶ್ವವಿದ್ಯಾಲಯದಂತೆ ಕಾರ್ಯನಿರ್ವಹಿಸುತ್ತಿದೆ. ಶಿಕ್ಷಕನ ನಿವೃತ್ತಿ ಎಂಬುದು ಕೇವಲ ನೌಕರಿಗೆ ಸಂಬಂಧಿಸಿದ್ದೇ ಹೊರತು ಜ್ಞಾನಾರ್ಜನೆಗೆ ಸಂಬಂಧಿಸಿದ್ದಲ್ಲ. ಶಿಕ್ಷಕ ಸದಾ ಶಿಕ್ಷಕನಾಗಿಯೇ, ಗುರುವಿನ ಸ್ಥಾನದಲ್ಲಿಯೇ ಇರುತ್ತಾನೆ. ಸಮಾಜದಲ್ಲಿನ ಯುವಶಕ್ತಿಯನ್ನು ರೂಪಿಸುವ ಸಾಮರ್ಥ್ಯ ಶಿಕ್ಷಕರಲ್ಲಿದ್ದು, ವಿದ್ಯಾರ್ಥಿಗಳ ಮೇಲೆ ಶಿಕ್ಷಕರ ಪ್ರಭಾವ ಬಹಳಷ್ಟಿದೆ. ಹೀಗಾಗಿ ಶಿಕ್ಷಕರ ಪಾತ್ರ ಅತ್ಯಂತ ಮಹತ್ವದ್ದಾಗಿದೆ. ಈ ನಿಟ್ಟಿನಲ್ಲಿ ಕಟ್ಟೀಮನಿ ಪ್ರತಿಷ್ಠಾನವು ಮಾದರಿ ಶಿಕ್ಷಕರನ್ನು ಗುರುತಿಸಿ ಪ್ರಶಸ್ತಿ ನೀಡಿ ಗೌರವಿಸುತ್ತಿರುವುದು ಹೆಮ್ಮೆಯ ಸಂಗತಿ ಎಂದರು.

ಧಾರವಾಡದ ಡಯಟ್ ಸಾಂಖ್ಯಿಕ ಅಧಿಕಾರಿ ಪದ್ಮನಾಭ ಗುಡಿ ಅವರು ಕೃತಿ ಪರಿಚಯ ಮಾಡುತ್ತಾ, 'ಶಿಕ್ಷಕರ ಸಹಕಾರಿ ಸಂಘಗಳು: ಜಿಜ್ಞಾಸೆ' ಕೃತಿಯು ಶಿಕ್ಷಕರ ಸಹಕಾರದ ನಿನ್ನೆ, ಇಂದು ಮತ್ತು ನಾಳೆಯನ್ನು ಜೋಡಿಸುವ ಪ್ರಯತ್ನವಾಗಿದೆ. ಸಹಕಾರಿ ಕ್ಷೇತ್ರದ ಪ್ರತಿಯೊಬ್ಬ ಚಿಂತಕ, ಕಾರ್ಯಕರ್ತ ಹಾಗೂ ಶಿಕ್ಷಕ ಸಮುದಾಯಕ್ಕೆ ಈ ಕೃತಿ ಅರ್ಥಪೂರ್ಣ ಚಿಂತನೆಯ ಕನ್ನಡಿಯಾಗಿದೆ ಎಂದು ಹೇಳಿದರು.

'ಶಿಕ್ಷಕರ ಸಹಕಾರಿ ಸಂಘಗಳು: ಜಿಜ್ಞಾಸೆ' ಕೃತಿ ಬಿಡುಗಡೆ ಮಾಡಿ ಮಾತನಾಡಿದ ಬಿ.ವಿ.ವಿ. ಸಂಘದ ಆಡಳಿತಾಧಿಕಾರಿ ಡಾ. ವಿಜಯಕುಮಾರ ಕಟಗಿಹಳ್ಳಿಮಠ ಅವರು ಶಿಕ್ಷಕನು ಕೇವಲ ಜ್ಞಾನವನ್ನು ಬೋಧಿಸುವವನಲ್ಲ. ಸಹಕಾರ, ಸಮಾನತೆ, ಸ್ವಾವಲಂಬನೆ ಹಾಗೂ ಸಾಮಾಜಿಕ ಹೊಣೆಗಾರಿಕೆಯ ಮೌಲ್ಯಗಳನ್ನು ಸಮಾಜಕ್ಕೆ ಪರಿಚಯಿಸುವ ಶಿಲ್ಪಿಯಾಗಿದ್ದಾನೆ, ಡಾ. ಎಚ್.ಎಫ್. ಕಟ್ಟೀಮನಿಯವರು ಕರ್ನಾಟಕದ ಲಾಲ್ ಬಹದ್ದೂರ್ ಶಾಸ್ತ್ರಿಯವರಂತೆಯೇ ಸರಳ ಜೀವನ ನಡೆಸಿದವರು. ಬಿ.ವಿ.ವಿ. ಸಂಘಕ್ಕೆ ಅವರು ಸಲ್ಲಿಸಿದ ಸೇವೆ ಅಪಾರ ಹಾಗೂ ಸ್ಮರಣೀಯವಾಗಿದೆ ಎಂದು ಹೇಳಿದರು.

ಶಿಕ್ಷಣದಲ್ಲಿ ಆತುರ ಬೇಡ: ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಶಿಕ್ಷಣ ಇಲಾಖೆಯ ವಿಶ್ರಾಂತ ನಿರ್ದೇಶಕ ಹಾಗೂ ಕಟ್ಟೀಮನಿ ಪ್ರತಿಷ್ಠಾನದ ಸಲಹಾ ಸಮಿತಿ ಸದಸ್ಯ ಎಸ್.ಆರ್. ಮನಹಳ್ಳಿ ಮಾತನಾಡಿ, ಇಂದು ಎಲ್ಲ ಕ್ಷೇತ್ರಗಳಲ್ಲಿಯೂ ಅವಸರ ಹೆಚ್ಚಾಗಿದೆ. ಆದರೆ ಶಿಕ್ಷಣವನ್ನು ಅವಸರದಲ್ಲಿ ಕಲಿತು ಮುಗಿಸುವ ವಿಷಯವಲ್ಲ. ಏಕಾಂತದಲ್ಲಿ ನಿವಾಂತನಾಗಿ, ಸಮಾಧಾನದಿಂದ ಕಲಿಯಬೇಕಾದ ಕ್ರಿಯೆಯೇ ಶಿಕ್ಷಣವಾಗಿದೆ. ಆದ್ದರಿಂದ ಶಿಕ್ಷಣದಲ್ಲಿ ದಾವಂತ ಬೇಡ ಎಂದ ಅವರು ಬದುಕಿಗೆ ಅನ್ನ ನೀಡಿದವರನ್ನು ಸ್ಮರಿಸುವುದು ಅಗತ್ಯ. ಪ್ರತಿಯೊಬ್ಬರಲ್ಲಿಯೂ ಉಪಕಾರ ಸ್ಮರಣೆಯ ಗುಣ ಇರಬೇಕು. ಕರ್ನಾಟಕದಲ್ಲಿ ಶಿಕ್ಷಣದ ಗುಣಮಟ್ಟ ಸುಧಾರಣೆಗೆ ಸರ್ಕಾರದ ವ ' ೦ ಟ ್ ದ ' ಲಿ ್ ಕಾರ್ಯನಿರ್ವಹಿಸುತ್ತಿರುವ ಪ್ರತಿಷ್ಠಾನಗಳಲ್ಲಿ ಡೆಪ್ಯೂಟಿ ಚೆನ್ನಬಸವಪ್ಪ ಪ್ರತಿಷ್ಠಾನ ಹಾಗೂ ಡಾ. ಎಚ್.ಎಫ್. ಕಟ್ಟೀಮನಿ ಪ್ರತಿಷ್ಠಾನಗಳು ಪ್ರಮುಖವಾಗಿವೆ. ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಮಾದರಿ ಶಿಕ್ಷಕರನ್ನು ಗುರುತಿಸಿ ಸನ್ಮಾನಿಸಿ, ಪ್ರಶಸ್ತಿ ನೀಡಿ ಗೌರವಿಸುತ್ತಿರುವುದು ಹೆಮ್ಮೆಯ ಸಂಗತಿ ಎಂದರು.

60 ಶಿಕ್ಷಕರಿಗೆ ಪ್ರಶಸ್ತಿ ಪ್ರದಾನ: ಜಿಲ್ಲೆಯ ಎಲ್ಲ ತಾಲೂಕುಗಳಲ್ಲಿ ಹೆಚ್ಚು ವರ್ಗ ಸರಾಸರಿ ಅಂಕಗಳನ್ನು ಗಳಿಸಿದ ಸುಮಾರು 60 ಜನ ಶಿಕ್ಷಕರನ್ನು ಸನ್ಮಾನಿಸಿ 'ಶಿಕ್ಷಣ ಪರಿಶ್ರಮ ಹಿರಿಮೆಗೆ ಮನ್ನಣೆ' ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಕಾರ್ಯಕ್ರಮದಲ್ಲಿ ಬಸವರಾಜ ಕುಸುಗಲ್, ಎಸ್.ಎಸ್. ಹಾಲವರ, ರೋಹಿಣಿ ದಾನಿ, ಗಿರೀಶ ಪದಕಿ ಸೇರಿದಂತೆ ಶಿಕ್ಷಣ ಇಲಾಖೆಯ ಅಧಿಕಾರಿಗಳು, ಶಿಕ್ಷಕರು ಹಾಗೂ ಗಣ್ಯರು ಉಪಸ್ಥಿತರಿದ್ದರು.

ಫೋಟೋ 01-02 ಜಿಲ್ಲೆಯ ಶಿಕ್ಷಕರಿಗೆ 'ಶಿಕ್ಷಣ ಪರಿಶ್ರಮ ಹಿರಿಮೆಗೆ ಮನ್ನಣೆ' ಪ್ರಶಸ್ತಿ ಪ್ರದಾನ

ಫೋಟೋ 03 'ಶಿಕ್ಷಕರ ಸಹಕಾರಿ ಸಂಘಗಳು: ಜಿಜ್ಞಾಸೆ' ಕೃತಿ ಬಿಡುಗಡೆ

ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಸೌಲಭ್ಯ ವಿಳಂಬವಾಗದಿರಲಿ, ಜವಾಬ್ದಾರಿಯಿಂದ ಕೆಲಸ ಮಾಡಿ- ಜಿಲ್ಲಾಧಿಕಾರಿ ಇಕ್ರಂ ಶರೀಫ್

ಕಲಬುರಗಿ, ಸೆ. 30

ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಸಿಗಬೇಕಾದ ಸೌಲಭ್ಯಗಳು ವಿಳಂಬವಾಗಬಾರದು. ಪ್ರತಿಯೊಬ್ಬ ಅಧಿಕಾರಿಯೂ ತಮ್ಮ ಇಲಾಖೆಗೆ ಸಂಬಂಧಿಸಿದ ಕ್ರಿಯಾ ಯೋಜನೆಗಳ ಸಫಲತೆಗೆ ಜವಾಬ್ದಾರಿಯಿಂದ ಕೆಲಸ ಮಾಡಬೇಕು ಎಂದು ಜಿಲ್ಲಾಧಿಕಾರಿ ಇಕ್ರಂ ಶರೀಫ್ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಬುಧವಾರ ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಸಮಾಜ ಕಲ್ಯಾಣ ಇಲಾಖೆ ಹಮ್ಮಿಕೊಂಡಿರುವ ಎಸ್ ಸಿಎಸ್‌ಪಿ ಮತ್ತು ಟಿಎಸ್ ಪಿ ಜಿಲ್ಲಾ ಮಟ್ಟದ 2ನೇ ತ್ರೈಮಾಸಿಕ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಯಾವುದೇ ಕಾರಣಕ್ಕೂ ನಿಗದಿತ ಅವಧಿಯೊಳಗೆ ಅನುದಾನ ಬಳಕೆಯಾಗದೆ ಇಂದಲ್ಲಿ ಮುಂದಿನ ತ್ರೈಮಾಸಿಕಕ್ಕೆ ಬಾಕಿ ಉಳಿಯಬಾರದು. ಸಭೆಯಲ್ಲಿ ವಿವಿಧ ಸರ್ಕಾರಿ ಯೋಜನೆಗಳು ಹಾಗೂ ಅನುದಾನಗಳು ನಿಗದಿತ ಅವಧಿಯೊಳಗೆ ಶೇ. 100 ರಷ್ಟು ಪ್ರಗತಿ ಸಾಧಿಸಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದರು.

ಸಭೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ (ಅ/ಖ) ಅಭಿವೃದ್ಧಿ ಯೋಜನೆಯಡಿ ಜಿಲ್ಲಾ ಹಾಗೂ ರಾಜ್ಯ ವಲಯಕ್ಕೆ ಒಟ್ಟು 9,794.41 ಲಕ್ಷ ಅನುದಾನ ಹಂಚಿಕೆಯಾಗಿರುವ ಕುರಿತು ಸುದೀರ್ಘ ಪರಿಶೀಲನೆ ನಡೆಸಲಾಯಿತು. ಇದರಲ್ಲಿ ರಾಜ್ಯ ವಲಯಕ್ಕೆ ಸುಮಾರು 8,051.17 ಲಕ್ಷ ಹಾಗೂ ಜಿಲ್ಲಾ ವಲಯಕ್ಕೆ 1,743.24 ಲಕ್ಷ ಅನುದಾನ ಹಂಚಿಕೆ ಮಾಡಲಾಗಿದ್ದು ಅದರಲ್ಲಿ, ಬಿಡುಗಡೆಯಾದ



11,922.13 ಲಕ್ಷ ಮೊತ್ತದಲ್ಲಿ ಒಟ್ಟು 10,709.43 ಲಕ್ಷ ಅನುದಾನವು ಯಶಸ್ವಿಯಾಗಿ ಬಳಕೆಯಾಗಿದೆ ಎಂದು ತಿಳಿಸಿದರು.

ಪ್ರತಿ ಇಲಾಖೆಯ ಅಧಿಕಾರಿಗಳು ತಮ್ಮ ಕ್ರಿಯಾ ಯೋಜನೆಗಳಿಗೆ ಸಂಬಂಧಪಟ್ಟವರಿಂದ ಸೂಕ್ತ ಅನುಮೋದನೆ ಪಡೆದುಕೊಂಡಿದ್ದಾರೆಯೇ ಎಂಬುದನ್ನು ಖಾತರಿಪಡಿಸಿಕೊಂಡು, ನಿಗದಿತ ಸಮಯದೊಳಗೆ ಅನುದಾನವನ್ನು ಪೂರ್ಣ ಪ್ರಮಾಣದಲ್ಲಿ ವೆಚ್ಚ ಮಾಡಬೇಕೆಂದು ಸಭೆಯಲ್ಲಿ ನಿರ್ದೇಶಿಸಲಾಯಿತು.

ರೇಷ್ಮೆ ಹಾಗೂ ಮೀನುಗಾರಿಕೆ ಇಲಾಖೆಗಳಲ್ಲಿ ಫಲಾನುಭವಿಗಳ ಆಯ್ಕೆ ಪ್ರಕ್ರಿಯೆ ಮತ್ತು ಅನುದಾನ ಬಳಕೆಯ ಪ್ರಗತಿಯನ್ನು ಪರಿಶೀಲಿಸಲಾಯಿತು. ಮುಂದಿನ ಸಭೆಯ ವೇಳೆಗೆ ಅರ್ಹ ಫಲಾನುಭವಿಗಳಿಗೆ ಅಗತ್ಯ ಸೌಲಭ್ಯಗಳನ್ನು ತಲುಪಿಸಿ, ವೆಚ್ಚದ ಪ್ರಗತಿಯನ್ನು ಕಡ್ಡಾಯವಾಗಿ ಸಾಧಿಸಬೇಕೆಂದು ಕಟ್ಟುನಿಟ್ಟಿನ ಆದೇಶ ನೀಡಲಾಯಿತು. ಇದರೊಂದಿಗೆ ಗ್ರಾಮೀಣ ಕೈಗಾರಿಕೆಗಳು, ಸಣ್ಣ ನೀರಾವರಿ, ವೈದ್ಯಕೀಯ ಶಿಕ್ಷಣ, ಶಾಲಾ ಅನುದಾನಗಳು, ವಾಹನ ಸೌಲಭ್ಯ ಯೋಜನೆಗಳು, ವಿದ್ಯಾ ವಿಕಾಸ ಯೋಜನೆ ಹಾಗೂ ಸಾರ್ವಜನಿಕ ವಿತರಣಾ ವ್ಯವಸ್ಥೆಯಡಿ ಅನ್ನಭಾಗ್ಯ ಯೋಜನೆಯ ಸದುಪಯೋಗದ ಕುರಿತು ವಿವರವಾದ ಚರ್ಚೆ ನಡೆಸಲಾಯಿತು.

ಅನುಮೋದನೆಗೊಂಡ ಯೋಜನೆಗಳು ಮತ್ತು ಫಲಾನುಭವಿಗಳ ಆಯ್ಕೆ ಪ್ರಕ್ರಿಯೆಯನ್ನು ಡಿಸೆಂಬರ್ ವೇಳೆಗೆ ಪೂರ್ಣಗೊಳಿಸಿ, ಬ್ಯಾಂಕ್‌ಗಳ ಮೂಲಕ ಅಗತ್ಯ ಅನುದಾನ ನೇರವಾಗಿ ಫಲಾನುಭವಿಗಳಿಗೆ ತಲುಪುವಂತೆ ಮಾಡಲು ಸೂಚಿಸಲಾಯಿತು. ಇಲಾಖೆಗಳ ನಡುವೆ ಸಮನ್ವಯದ ಕೊರತೆ ಕಂಡುಬಂದಲ್ಲಿ ಸಹಿಸುವಂತಿಲ್ಲ ಎಂದು ಎಚ್ಚರಿಸಿದ ಜಿಲ್ಲಾಧಿಕಾರಿಗಳು, ಪ್ರತಿಯೊಂದು ಇಲಾಖೆಯ ಪ್ರಗತಿಯೂ ಮತ್ತೊಂದಕ್ಕೆ ಪೂರಕವಾಗಿರಬೇಕು ಮತ್ತು ಅಧಿಕಾರಿಗಳು ಪರಸ್ಪರ ಸಮನ್ವಯದಿಂದ ಕಾರ್ಯನಿರ್ವಹಿಸಿ ಪ್ರಗತಿಯನ್ನು ತ್ವರಿತಗೊಳಿಸಬೇಕು ಎಂದರು.

ಸಭೆಯಲ್ಲಿ ಜಿಲ್ಲಾ ಸಮಾಜ ಕಲ್ಯಾಣ ಜಂಟಿ ನಿರ್ದೇಶಕಿ ಪ್ರೀತಿ ಚಂದ್ರಶೇಖರ್, ಜಿಲ್ಲಾ ಪಂಚಾಯತ್ ಮುಖ್ಯ ಯೋಜನಾಧಿಕಾರಿ ಪ್ರಭಾರ ಮಧುಮತಿ, ಪ್ರೊಜೆಕ್ಟರ್ ಯೋಜನಾ ನಿರ್ದೇಶಕ ಜಗದೇವಪ್ಪ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಉಪನಿರ್ದೇಶಕ ರಾಜಕುಮಾರ್ ರಾಠೋಡ ಪ್ರವಾಸೋದ್ಯಮ ಇಲಾಖೆ ಉಪ ನಿರ್ದೇಶಕ ಬೇಬಿಮುಗೇರ್ ಸೇರಿದಂತೆ ಜಿಲ್ಲಾಮಟ್ಟದ ಅಧಿಕಾರಿಗಳು ಸಭೆಯಲ್ಲಿ ಭಾಗವಹಿಸಿದ್ದರು.

ಪ್ರವಾಸೋದ್ಯಮದ ವೈವಿಧ್ಯತೆ ಕಾಯ್ದುಕೊಳ್ಳಲು ಮತ್ತು ಪರಿಸರ ನೈರ್ಮಲ್ಯಕ್ಕೆ ಬೀದರ್ ಡಿಸಿ ಶಿಲ್ಪಾ ಶರ್ಮಾ ಕರೆ

ಬೀದರ, ಸೆ.30-

ಶ್ರೀಮಂತ ಸಂಸ್ಕೃತಿ ಮತ್ತು ಐತಿಹಾಸಿಕ ಪರಂಪರೆಯನ್ನು ಕಾಯ್ದುಕೊಳ್ಳುವುದರ ಜೊತೆಗೆ ಪ್ರವಾಸಿ ತಾಣಗಳ ಪರಿಸರ ನೈರ್ಮಲ್ಯವನ್ನು ಕಾಪಾಡುವುದು ಪ್ರತಿ ಯೊಬ್ಬ ನಾಗರಿಕನ ಕರ್ತವ್ಯವಾಗಿದೆ ಎಂದು ಬೀದರ್ ಜಿಲ್ಲಾಧಿಕಾರಿ ಶಿಲ್ಪಾ ಶರ್ಮಾ ಹೇಳಿದರು.

ಬುಧವಾರ ನಗರದ ಗುರು ನಾನಕ್ ದೇವ್ ಇಂಜಿನಿಯರಿಂಗ್ ಕಾಲೇಜಿನ ಸಭಾಂಗಣದಲ್ಲಿ ಜಿಲ್ಲಾ ಡಳಿತ, ಪ್ರವಾಸೋದ್ಯಮ ಇಲಾಖೆ ಹಾಗೂ ಗುರುನಾನಕ್ ದೇವ್ ಇಂಜಿನಿಯರಿಂಗ್ ಕಾಲೇಜಿನ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಂಡಿದ್ದ ವಿಶ್ವ ಪ್ರವಾಸೋದ್ಯಮ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಬೀದರ್ ಜಿಲ್ಲೆಯು ಪ್ರವಾಸೋ ದ್ಯಮದ ಎಲ್ಲಾ ವೈವಿಧ್ಯಮಯ ವಿಭಾಗಗಳನ್ನು ತನ್ನಲ್ಲಿ ಒಳ ಗೊಂಡಿದ್ದು, ವಿಶ್ವಮಟ್ಟದಲ್ಲಿ ಪ್ರದರ್ಶಿಸಲು ಹೆಮ್ಮೆಪಡುವಂತಹ ಸುಂದರ ತಾಣವಾಗಿದೆ ಎಂದು ಅವರು ತಿಳಿಸಿದರು.

ಜಿಲ್ಲೆಯ ಧಾರ್ಮಿಕ ಪ್ರವಾಸೋ ದ್ಯಮದ ಬಗ್ಗೆ ಉಲ್ಲೇಖಿಸಿದ ಅವರು, ಝರಣಿ ನರಸಿಂಹ ಸ್ವಾಮಿ ದೇವಾಲಯ, ಪ್ರಸಿದ್ಧ ಗುರುದ್ವಾರ, ಪಾಪನಾಶ ದೇವಾಲಯ ಹಾಗೂ ಬಸವಕಲ್ಯಾಣದ ಅನುಭವ ಮಂಟ ಪಗಳು ಕೇವಲ ಒಂದು ಧರ್ಮಕ್ಕೆ ಸೀಮಿತವಾಗಿರದೆ, ಎಲ್ಲಾ ವರ್ಗದ ಮತ್ತು ಎಲ್ಲಾ ಧರ್ಮಗಳ ಜನರನ್ನು ಆಕರ್ಷಿಸುತ್ತವೆ ಎಂದರು.

ಗುರುನಾನಕ್ ದೇವ್ ಇಂಜಿನಿಯರಿಂಗ್ ಕಾಲೇಜಿನ ಪ್ರಾಂಶುಪಾಲರಾದ ಡಾ.ವೀಣಾ ಎಸ್. ಸೊರಗನ್ವಿ ಅವರು ಮಾತನಾಡಿ ಕರ್ನಾಟಕದ ಪ್ರಸಿದ್ಧ ಐತಿಹಾಸಿಕ ತಾಣಗಳ ಸೌಂದರ್ಯ ಮತ್ತು ಸಾಂಸ್ಕೃತಿ ಪರಂಪರೆಯನ್ನು ಎತ್ತಿಹಿಡಿಯಲು ಹಾಗೂ ಅವುಗಳ ರಕ್ಷಣೆಗೆ ಕೃತಕ ಬುದ್ಧಿಮತ್ತೆಯಂತಹ (೦) ಆಧುನಿಕ ತಂತ್ರಜ್ಞಾನವನ್ನು ಬಳಸಿಕೊಳ್ಳಲು



ಯುವ ಇಂಜಿನಿಯರಿಂಗ್ ವಿದ್ಯಾರ್ಥಿಗಳು ಮುಂದಾಗಬೇಕು ಎಂದು ಕರೆ ನೀಡಿದರು.

ಪ್ರಸ್ತುತ ವಾಯು ಮಾಲಿನ್ಯ, ಪ್ರವಾಹ ಹಾಗೂ ವಾತಾವರಣದ ವೈಪರೀತ್ಯಗಳಿಂದಾಗಿ ನಮ್ಮ ಐತಿಹಾಸಿಕ ಸ್ಮಾರಕಗಳು ಹಾನಿಗೊಳಗಾಗುತ್ತಿವೆ.

ಇವುಗಳನ್ನು ಸಂರಕ್ಷಿಸಲು ವಿದ್ಯಾರ್ಥಿಗಳು ಮತ್ತು ನಾಗರಿಕರು ಜಂಟಿಯಾಗಿ ಶ್ರಮಿಸಬೇಕು. ಗಾಳಿ, ನೀರು ಮತ್ತು ಮಣ್ಣು ಎಲ್ಲರಿಗೂ ಸೇರಿದ್ದು, ಅವುಗಳನ್ನು ಮಿತವಾಗಿ ಬಳಸಿ ಪರಿಸರವನ್ನು ಸ್ವಚ್ಛವಾಗಿಡುವುದು ಎಲ್ಲರ ಹೊಣೆಗಾರಿಕೆಯಾಗಿದೆ. ಮುಂದಿನ ದಿನಗಳಲ್ಲಿ ಬೀದರ್ ಪ್ರವಾಸೋದ್ಯಮವನ್ನು ಉತ್ತೇಜಿಸಲು ಹೊಸ ಮೊಬೈಲ್ ಆ್ಯಪ್‌ಗಳನ್ನು ಅಭಿವೃದ್ಧಿಪಡಿಸುವ ಹಾಗೂ ವಿದ್ಯಾರ್ಥಿಗಳು ರೂಪಿಸಿದ ಅತ್ಯುತ್ತಮ ತಾಂತ್ರಿಕ ಯೋಜನಾ ಮಾದರಿಗಳನ್ನು ಸರ್ಕಾರಕ್ಕೆ ಶಿಫಾರಸು ಮಾಡುವ ಯೋಜನೆ ಇದೆ ಎಂದು ಅವರು ತಿಳಿಸಿದರು.

ವಿಶ್ವ ಪ್ರವಾಸೋದ್ಯಮ ದಿನಾಚ ರಣೆಯ ಅಂಗವಾಗಿ ಆಯೋಜಿಸಲಾ ಗಿದ್ದ ವಿವಿಧ ಸ್ಪರ್ಧೆಗಳಲ್ಲಿ ವಿಜೇತ ರಾದ ವಿದ್ಯಾರ್ಥಿಗಳಿಗೆ ಪ್ರಮಾಣ ಪತ್ರಗಳನ್ನು ವಿತರಿಸಲಾಯಿತು.

ಈ ಸಂದರ್ಭದಲ್ಲಿ ಬೀದರ್ ಪ್ರವಾಸೋದ್ಯಮ ಇಲಾಖೆಯ ಸಹಾಯಕ ನಿರ್ದೇಶಕರಾದ ಶಿವ ಲಿಂಗಪ್ಪ ಡೆಂಗಿ, ಬೆಳಗಾವಿ ವಿ.ಟಿ. ಯು ಇ.ಸಿ ಸದಸ್ಯರಾದ ಡಾ.ಪವಿತ್ ಸಿಂಗ್, ಜಿ.ಎನ್.ಡಿ.ಇ.ಸಿ ನಿರ್ದೇ ಶಕ ಹಾಗೂ ಆಡಳಿತಾಧಿಕಾರಿ ಕರ್ನಲ್ ರವಿದೀಪ್ ಸಿಂಗ್, 'ಪ್ರವಾಸಿ ಮಿತ್ರ' ಸಿಬ್ಬಂದಿ ಹಾಗೂ ಪ್ರವಾಸೋದ್ಯಮ ಇಲಾಖೆಯ ಸಿಬ್ಬಂದಿಯವರು ಉಪಸ್ಥಿತರಿದ್ದರು.

ನಿಮ್ಮೂರು ಸುದ್ದಿ

ಸಂಪಾದಕೀಯ



ದೇಶಕ್ಕೆ ಆರ್ಥಿಕ ಬಿಕ್ಕಟ್ಟು ಎದುರಾಗಲಿದೆಯೇ, ನಾಯಕರ ಮಾತು ಎಚ್ಚರಿಕೆಯ ಗಂಟೆಯೇ?

ವಿದೇಶಾಂಗ ನೀತಿ ಗೊತ್ತಿಲ್ಲದ ಜೈಶಂಕರ್, ಬಡವರು ಹೇಗೆ ಬದುಕುತ್ತಿದ್ದಾರೆ ಎಂದು ಅರಿಯದ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಮತ್ತು ಕಳೆದ 12 ವರ್ಷಗಳಿಂದ ಸುಳ್ಳು ಹೇಳುತ್ತಲೇ ಬಂದ ಪ್ರಧಾನಿ ನರೇಂದ್ರ ಮೋದಿಯವರು- ಇವರಿಂದ ಈ ದೇಶ ಉದ್ಧಾರವಾಗುವುದು ಸಾಧ್ಯವೇ?

ಇತ್ತೀಚಿಗೆ ವಿದೇಶಾಂಗ ಸಚಿವ ಜೈಶಂಕರ್ 4 ಎಫ್(ಫುಡ್, ಫ್ಯೂಯಲ್, ಫರ್ಟಿಲೈಸರ್, ಫೈನಾನ್ಸ್)ಗಳ ಕುರಿತು ಜಾಗತಿಕ ಮಟ್ಟದಲ್ಲಿ ಪ್ರಸ್ತಾಪಿಸಿದ್ದಾರೆ. ಅದು ಈಗ ಪರ-ವಿರೋಧ ಚರ್ಚೆಗೆ ಕಾರಣವಾಗಿದೆ. ವಿವಾದಕ್ಕೆ ತಿರುಗಿದೆ. ದೇಶದ ಜನರಲ್ಲಿ ಆತಂಕ, ತಲ್ಲಣವನ್ನೂ ಸೃಷ್ಟಿಸಿದೆ.

ಆಹಾರ, ಇಂಧನ, ಗೊಬ್ಬರ ಮತ್ತು ಹಣಕಾಸು- ಇವು ಒಂದು ದೇಶದ ಆರ್ಥಿಕ ಹಾಗೂ ರಾಷ್ಟ್ರೀಯ ಭದ್ರತೆಯ ಸ್ಥಿತಿಯನ್ನು ಅರ್ಥಮಾಡಿಕೊಳ್ಳಲು ಬಹಳ ಉಪಯುಕ್ತವಾದ ನಾಲ್ಕು ಸೂಚಕಗಳು. ದೇಶದ ಸಂಪೂರ್ಣ ಸ್ಥಿತಿಯನ್ನು ಇವುಗಳಿಂದಷ್ಟೇ ನಿರ್ಧರಿಸಲಾಗುವುದಿಲ್ಲ. ನಾಳೆಯಿಂದಲೇ ದೇಶದಲ್ಲಿ ಆಹಾರ, ಇಂಧನ, ಗೊಬ್ಬರ ಕೊರತೆಯುಂಟಾಗುತ್ತದೆ ಅಂತೇನೂ ಅಲ್ಲ. ಆದರೆ, ಕೆಲವು ವರ್ಷಗಳಿಂದ ನಡೆಯುತ್ತಿರುವ ಉಕ್ರೇನ್-ರಷ್ಯಾ, ಇಸ್ರೇಲ್-ಪ್ಯಾಲಸ್ತೀನ್ ಮತ್ತು ಇತ್ತೀಚಿನ ಅಮೆರಿಕ-ಇರಾನ್ ಯುದ್ಧಗಳು ಹಾಗೂ ಅವುಗಳಿಂದಾದ ಪಲ್ಲಟಗಳ ಪರಿಣಾಮವಾಗಿ, ಹಲವು ದೇಶಗಳ ಆರ್ಥಿಕ ಸ್ಥಿತಿ ಏರುಪೇರು ಆಗಿದೆ. ಅದರಲ್ಲಿ ಅನುಮಾನವೇ ಇಲ್ಲ.

ಆದರೆ, ದೇಶದ ಆಹಾರ ಸಂಗ್ರಹ, ಇಂಧನ ಭದ್ರತೆ, ಗೊಬ್ಬರ ದಾಸ್ತಾನು, ವಿದೇಶಿ ವಿನಿಮಯ ಮತ್ತು ಸರ್ಕಾರದ ಹಣಕಾಸು ಸಾಮರ್ಥ್ಯ ಯಾವ ಸ್ಥಿತಿಯಲ್ಲಿದೆ; ದೇಶ ಎಷ್ಟು ಕಾಲ ಈ ಒತ್ತಡವನ್ನು ತಡೆದುಕೊಳ್ಳಬಲ್ಲದು ಎಂಬುದನ್ನು ದೇಶವನ್ನಾಳುತ್ತಿರುವ ನಾಯಕರು ಜನತೆಗೆ ತಿಳಿಸುತ್ತಿಲ್ಲ. ಇದು ಈಗ ಆರ್ಥಿಕ ತಜ್ಞರ ನಡುವಿನ ಬಹುದೊಡ್ಡ ಚರ್ಚೆಯಾಗಿದೆ.

ವಿದೇಶಾಂಗ ಸಚಿವ ಜೈಶಂಕರ್ ಅವರ ಮಾತಿನಲ್ಲಿ ಆ ಆತಂಕವಿದೆ, ಸ್ಪಷ್ಟತೆ ಇಲ್ಲ. ಆದರೆ ದೇಶ ಭವಿಷ್ಯದಲ್ಲಿ ಆರ್ಥಿಕ ಬಿಕ್ಕಟ್ಟಿಗೆ ಒಳಗಾಗಬಹುದು, ಭಾರೀ ಸಮಸ್ಯೆಗೆ ಸಿಲುಕಬಹುದು, ಕೆಲವು ವಿದ್ಯಮಾನಗಳು ಅದಕ್ಕೆ ಪೂರಕವಾಗಿ ವರ್ತಿಸಬಹುದು ಎಂಬ ಆತಂಕವಿರುವುದಂತೂ ಸತ್ಯ. ಅದಕ್ಕೆ ಅವರು ಕೊಡುವ ಕಾರಣಗಳು: ದೀರ್ಘಕಾಲದ ಯುದ್ಧ, ಹಾರ್ಮುಜ್ ಮತ್ತು ಕಪ್ಪು ಸಮುದ್ರ ಜಲಸಂಧಿಗಳ ಅಡಚಣೆ. ಇದರಿಂದಾಗಿ ಆಮದು-ರಫ್ತು ವ್ಯವಹಾರಕ್ಕೆ ತೊಡಕುಂಟಾಗಿದೆ. ಜಾಗತಿಕ ತೈಲ ಬೆಲೆ ತುಟ್ಟಿಯಾಗಿದೆ. ಹಾಗೆಯೇ ಜಾಗತಿಕ ಮಟ್ಟದಲ್ಲಿ ಎಲ್ ನಿನೊದಂತಹ ಹವಾಮಾನ ವೈಪರೀತ್ಯಗಳು ಸಂಭವಿಸುತ್ತಿರುವುದರಿಂದ, ಅದು ಆಹಾರ ಉತ್ಪನ್ನದ ಮೇಲೆ ಪರಿಣಾಮ ಬೀರಿದೆ. ಬೆಲೆ ಏರಿಕೆಯಾಗಿದೆ. ಜನರಲ್ಲಿ ಕೊಳ್ಳುವ ಶಕ್ತಿ ಕುಗ್ಗಿದೆ. ಹಣದುಬ್ಬರ ಹೆಚ್ಚಾಗಿದೆ. ರೂಪಾಯಿ ಅಪಮೌಲ್ಯವಾಗಿದೆ. ಷೇರು ಬೆಲೆ ಕುಸಿತ ಕಂಡಿದೆ. ಸುರಕ್ಷಿತ ಹೂಡಿಕೆ ತಾಣಗಳಿಂದ ಹಣ ತೆಗೆಯುತ್ತಿರುವುದು ಹಣಕಾಸು ಬಿಕ್ಕಟ್ಟನ್ನು ಬಿಗಡಾಯಿಸಿದೆ.

ಒಟ್ಟಾರೆ ದೇಶದ ಆರ್ಥಿಕ ಪರಿಸ್ಥಿತಿ ಗಂಭೀರವಾಗಿದೆ. ಅದನ್ನು ಜೈಶಂಕರ್ ಅವರು ನೇರವಾಗಿ ಹೇಳುವ ಬದಲು, ಸುತ್ತಿ ಬಳಸಿ ಹೇಳಿದ್ದಾರೆ. ವಾಸ್ತವ ಸ್ಥಿತಿಯನ್ನು ಜನರ ಮುಂದಿಟ್ಟರೆ ಅದು ಮೋದಿಯವರ ವರ್ಚಸ್ಸಿನ ಮೇಲೆ, ಕೇಂದ್ರ ಸರ್ಕಾರದ ಮೇಲೆ, ಜನರ ನಂಬಿಕೆಯ ಮೇಲೆ ಪರಿಣಾಮ ಬೀರುತ್ತದೆಂದು ಭಾವಿಸಿ ಹೆಣಗಾಡಿದ್ದಾರೆ. ಅದೇ ರೀತಿ ಮೋದಿಯವರು ಕೂಡ ಕೆಲವೇ ತಿಂಗಳುಗಳ ಹಿಂದೆ ಎಣ್ಣೆ ಕಡಿಮೆ ಬಳಸಿ, ಚಿನ್ನ ಖರೀದಿಸಬೇಡಿ ಎಂದು ದೇಶದ ಜನತೆಗೆ ಬುದ್ಧಿ ಹೇಳಿದ್ದನ್ನು ಇಲ್ಲಿ ಸ್ಮರಿಸಬಹುದು.

ವಿಪರ್ಯಾಸಕರ ಸಂಗತಿ ಎಂದರೆ, ಮೇ 2026ರಲ್ಲಿಯೇ ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿಯವರು, ಸದ್ಯದಲ್ಲಿಯೇ ದೇಶಕ್ಕೆ ಆರ್ಥಿಕ ಸುನಾಮಿ ಅಪ್ಪಳಿಸಲಿದೆ ಎಂದು ಭವಿಷ್ಯ ನುಡಿದಿದ್ದರು. ಅಷ್ಟೇ ಅಲ್ಲ, ಎದುರಾಗಲಿರುವ ಬಿಕ್ಕಟ್ಟಿಗೆ ಕೇಂದ್ರ ಸರ್ಕಾರ ಸಿದ್ದತೆ ಮಾಡಿಕೊಂಡಿಲ್ಲ ಎಂದು ವಿಷಾದ ಕೂಡ ವ್ಯಕ್ತಪಡಿಸಿದ್ದರು. ಆಗ ಬಿಜೆಪಿ ನಾಯಕರು ಮತ್ತು ಮಡಿಲ ಮಾಧ್ಯಮಗಳು ರಾಹುಲ್ ಗಾಂಧಿಯವರಿಗೆ ದೇಶದ್ರೋಹಿಯ ಪಟ್ಟ ಕಟ್ಟಿದ್ದರು. ಆದರೆ ಈಗ, ಕೇವಲ ನಾಲ್ಕು ತಿಂಗಳ ಅಂತರದಲ್ಲಿ ರಾಹುಲ್ ಗಾಂಧಿಯವರ ಭವಿಷ್ಯವನ್ನು ವಿದೇಶಾಂಗ ಸಚಿವ ಜೈಶಂಕರ್ ಮಾತುಗಳು ನಿಜ ಮಾಡುತ್ತಿವೆ.

ಇದಷ್ಟೇ ಅಲ್ಲ, ಕೇವಲ ಒಂದು ತಿಂಗಳ ಹಿಂದೆ, ದೇಶದ ಆರ್ಥಿಕತೆಯು 2026-27ನೇ ಸಾಲಿನ ಮೊದಲ ತ್ರೈಮಾಸಿಕದಲ್ಲಿ ಶೇಕಡಾ 7.8ರಷ್ಟು ಜಿಡಿಪಿ (ಒಟ್ಟು ಆಂತರಿಕ ಉತ್ಪನ್ನ) ಬೆಳವಣಿಗೆ ದಾಖಲಿಸಿದೆ ಎಂದು ಕೇಂದ್ರ ಸರ್ಕಾರ ಎದೆಯುಬ್ಬಿಸಿ ಹೇಳಿಕೊಂಡಿತ್ತು. ಆ ಅಂಕಿ-ಅಂಶಗಳನ್ನಿಟ್ಟು ಭಾರತ ಅಭಿವೃದ್ಧಿಪಥದತ್ತ ಎಂದು ಸಾರಿತ್ತು. ಆದರೆ, ಅದು ನಿಜವಾದ ಜಿಡಿಪಿ ದತ್ತಾಂಶವಲ್ಲ, ನಿಜಸ್ಥಿತಿಯನ್ನು ಮರೆಮಾಚಲು ಕೃತಕವಾಗಿ ಸೃಷ್ಟಿಸಲಾಗಿದ್ದು ಎನ್ನುವುದು ನಿಧಾನವಾಗಿ ಎಲ್ಲರ ಗಮನಕ್ಕೂ ಬಂದಿತ್ತು. ಜಾಗತಿಕ ಆರ್ಥಿಕತೆಯು ತೀವ್ರ ಇಂಧನ ಬಿಕ್ಕಟ್ಟನ್ನು ಎದುರಿಸುತ್ತಿದೆ. ಭಾರತ ವಿಶ್ವದಲ್ಲೇ ಅತಿ ಹೆಚ್ಚು ಇಂಧನ ಆಮದು ಮಾಡಿಕೊಳ್ಳುವ ದೇಶಗಳಲ್ಲಿ ಒಂದಾಗಿದೆ. ಇಂತಹ ಪರಿಸ್ಥಿತಿಯಲ್ಲಿ ಭಾರತದಲ್ಲಿ ಮಾತ್ರ ಈ ಪ್ರಮಾಣದ ಆರ್ಥಿಕ ಪ್ರಗತಿಯೇ ಎನ್ನುವುದು ಆರ್ಥಿಕ ತಜ್ಞರ ಅನುಮಾನವಾಗಿತ್ತು.

ಹಾಗೆಯೇ ಅವರು ಹಲವು ಗಂಭೀರ ಪ್ರಶ್ನೆಗಳನ್ನೂ ಎತ್ತಿದ್ದರು. ದೇಶದ ಆರ್ಥಿಕ ಬೆಳವಣಿಗೆಯ ಲಾಭ ನಿಜವಾಗಿಯೂ ಜನಸಾಮಾನ್ಯರಿಗೆ ಮುಟ್ಟುತ್ತಿದೆಯೇ, ಜನರ ಜೀವನಮಟ್ಟ ಸುಧಾರಿಸಿದೆಯೇ ಎಂದು ಪರಿಶೀಲಿಸುವುದು ಹೆಚ್ಚು ಸೂಕ್ತ ಎಂದಿದ್ದರು. ಜನರಿಗೆ ಅನ್ನ, ಬಟ್ಟೆ, ನೀರು, ಸೂರು ಸಿಕ್ಕಿ ಸುರಕ್ಷಿತವಾಗಿ, ನೆಮ್ಮದಿಯಾಗಿ ಬದುಕಬೇಕು. ಆದರೆ ದೇಶದಲ್ಲಿರುವ 140 ಕೋಟಿ ಜನರಲ್ಲಿ 80 ಕೋಟಿ ಬಡವರಿದ್ದಾರೆ ಎಂದು ಪ್ರಧಾನಿ ಮೋದಿಯವರೇ ಹೇಳಿದ್ದಾರೆ. ನೀತಿ ಆಯೋಗದ ಪ್ರಕಾರವೇ 15ರಿಂದ 29 ವರ್ಷದ ಸುಮಾರು 8.7 ಕೋಟಿ ಯುವಕರು ಕೆಲಸವಿಲ್ಲದೆ ಕೂತಿದ್ದಾರೆ. ದೇಶದ ಒಟ್ಟು ಕಾರ್ಮಿಕರಲ್ಲಿ ದಿನಗೂಲಿ ಕಾರ್ಮಿಕರೇ ಶೇಕಡ 20ರಷ್ಟಿದ್ದಾರೆ. ದೇಶಕ್ಕೆ ಹರಿದುಬರುತ್ತಿರುವ ನಿವ್ವಳ ವಿದೇಶಿ ನೇರ ಬಂಡವಾಳ ಪಾತಾಳಕ್ಕೆ ಕುಸಿದಿದೆ. ರಫ್ತು ವಹಿವಾಟು ಕಡಿಮೆಯಾಗಿ ಆಮದು ಹೆಚ್ಚಾಗುತ್ತಿದೆ. ಅಂದಮೇಲೆ ಮೇಕ್ ಇನ್ ಇಂಡಿಯಾ ಕತೆ ಏನಾಯಿತು? ವ್ಯವಸ್ಥೆ ಇಷ್ಟೊಂದು ಹದಗೆಟ್ಟಿರುವುದನ್ನು ನೋಡಿ ಇಂದಿನ ಯುವಪೀಳಿಗೆ (ಝೆನ್ ಜಿ) ಬೀದಿಗಿಳಿದು ಪ್ರತಿಭಟಿಸಿದ್ದಲ್ಲವೇ?

ವಿದೇಶಾಂಗ ನೀತಿ ಗೊತ್ತಿಲ್ಲದ ಜೈಶಂಕರ್, ಬಡವರು ಹೇಗೆ ಬದುಕುತ್ತಿದ್ದಾರೆ ಎಂದು ಅರಿಯದ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಮತ್ತು ಕಳೆದ 12 ವರ್ಷಗಳಿಂದ ಸುಳ್ಳು ಹೇಳುತ್ತಲೇ ಬಂದ ಪ್ರಧಾನಿ ನರೇಂದ್ರ ಮೋದಿಯವರು- ಇವರಿಂದ ಈ ದೇಶ ಉದ್ಧಾರವಾಗುವುದು ಸಾಧ್ಯವೇ? ಮುಂದೆ ಇನ್ನೆಂತಹ ದಿನಗಳ ಕಾದಿವೆಯೋ ಆ ಶ್ರೀರಾಮನೇ ಬಲ್ಲ!

ಇಂದು ಅಕ್ಟೋಬರ್ 2, 157ನೇ ಹುಟ್ಟುಹಬ್ಬ : ಗಾಂಧಿ, ಮಣಿನ ಅಸ್ಮಿತೆ, ದೇಶದ ಅಸ್ಮಿತೆ, ಮಾನವ ಅಸ್ಮಿತೆ

ಮೋಹನ್ ದಾಸ್ ಕರಮಚಂದ್ ಗಾಂಧಿ ಅವರ 157ನೇ ಹುಟ್ಟುಹಬ್ಬ. ಈಗ ಬಹುಶಃ ಅವರನ್ನು ಮಹಾತ್ಮ ಪಟ್ಟದಿಂದ ಇಳಿಸುವ ಸಂದರ್ಭ ಬಂದಿದೆ ಅಥವಾ ಈಗಾಗಲೇ ಇಳಿಸಿಯಾಗಿದೆ ಅಥವಾ ಅವರು ಆ ಸ್ಥಾನದಲ್ಲಿ ಕುಳಿತುಕೊಳ್ಳಲು ಅನರ್ಹರಾಗಿದ್ದಾರೆ ಅಥವಾ ಅವರನ್ನು ಮಹಾತ್ಮ ಎಂದು ಕರೆಯುವ ಅರ್ಹತೆಯನ್ನು ಜನಸಾಮಾನ್ಯರು ಕಳೆದುಕೊಂಡಿದ್ದಾರೆ.

ಸತ್ಯ – ಅಹಿಂಸೆ – ಸರಳತೆ – ಪ್ರಾಮಾಣಿಕತೆ – ಪಾರದರ್ಶಕತೆ ಯಾರಿಗೆ ಬೇಕಾಗಿದೆ. ಎಲ್ಲವೂ ಎಲ್ಲರೂ ಹಣ – ಅಧಿಕಾರ – ಪ್ರಶಸ್ತಿ – ಜನಪ್ರಿಯತೆ – ಸುಖಲೋಲುಪತೆಯ ಹಿಂದೆ ಬಿದ್ದಿದ್ದಾರೆ. ಸಾಮಾಜಿಕ ಮೌಲ್ಯಗಳು, ಪ್ರಾಕೃತಿಕ ಮೌಲ್ಯಗಳು, ಮಾನವೀಯ ಮೌಲ್ಯಗಳು, ನೈತಿಕ ಮೌಲ್ಯಗಳು ಕುಸಿದಿರುವುದು ಮಾತ್ರವಲ್ಲ ವಿರುದ್ಧ ಮೌಲ್ಯಗಳು ಮಾನ್ಯತೆ ಪಡೆದಿರುವ ಸಂದರ್ಭದಲ್ಲಿ ಈ ದೇಶದ ಸದ್ಯದ ಮಹಾತ್ಮರ ಪಟ್ಟಿ ಬದಲಾಗಿದೆ. ಆ ಸ್ಥಾನದಲ್ಲಿ ಬೇರೆಯವರು ಕುಳಿತಿದ್ದಾರೆ.

ಮಹಾತ್ಮ ನರೇಂದ್ರ ಮೋದಿ, ಮಹಾತ್ಮ ರಾಹುಲ್ ಗಾಂಧಿ,ಮಹಾತ್ಮ ಸಿದ್ದರಾಮಯ್ಯ, ಮಹಾತ್ಮ ಕುಮಾರಸ್ವಾಮಿ, ಮಹಾತ್ಮ ಅಮಿತ್ ಶಾ, ಮಹಾತ್ಮ ಡಿಕೆ ಶಿವಕುಮಾರ್, ಮಹಾತ್ಮ ಗೌತಮ್ ಅದಾನಿ, ಮಹಾತ್ಮ ಮುಖೇಶ್ ಅಂಬಾನಿ, ಮಹಾತ್ಮ ಅಜೀಮ್ ಪ್ರೇಮ್ ಜಿ, ಮಹಾತ್ಮ ನಾರಾಯಣ ಮೂರ್ತಿ, ಮಹಾತ್ಮ ಶಾರುಖ್ ಖಾನ್, ಮಹಾತ್ಮ ರಜನಿಕಾಂತ್, ಮಹಾತ್ಮ ಸುದೀಪ್, ಮಹಾತ್ಮ ಚಿರಂಜೀವಿ,ಮಹಾತ್ಮ ವಿಜಯ್, ಮಹಾತ್ಮ ಯಶ್,ಮಹಾತ್ಮ ಪವನ್ ಕಲ್ಯಾಣ್, ಮಹಾತ್ಮ ಜಗದ್ಗುರುಗಳು, ಮಹಾತ್ಮ ಮೌಲ್ವಿಗಳು, ಮಹಾತ್ಮ ಮಠಾಧೀಶರು, ಮಹಾತ್ಮ ಬಿಶಪ್ ಗಳು,ಮಹಾತ್ಮ ಮುನಿಗಳು, ಮಹಾತ್ಮ ಲಾಮಾಗಳು, ಮಹಾತ್ಮ ಜಗದ್ಗುರುಗಳು,ಮಹಾತ್ಮ ಶಿಕ್ಷಣ ಸಂಸ್ಥೆಗಳು, ಮಹಾತ್ಮ ವ್ಯಾಪಾರಿಗಳು, ಮಹಾತ್ಮ ಮಲ್ಟಿ ಸ್ಪೆಶಾಲಿಟಿ ಆಸ್ಪತ್ರೆಗಳು, ಮಹಾತ್ಮ ಕಾರ್ಪೊರೇಟ್ ಕುಳಗಳು, ಮಹಾತ್ಮ ರಿಯಲ್ ಎಸ್ಟೇಟ್ ಬ್ರೋಕರ್ ಗಳು, ಮಹಾತ್ಮ ಪತ್ರಕರ್ತರು,ಮಹಾತ್ಮ ವಕೀಲರು,ಮಹಾತ್ಮ ಚಿನ್ನದ ವ್ಯಾಪಾರಿಗಳು, ಮಹಾತ್ಮ ಶೇರ್ ಬ್ರೋಕರ್ ಗಳು.......

ಹೀಗೆ ಸಿಕ್ಕಾಪಟ್ಟೆ ಮಹಾತ್ಮರು ಈ ಸಮಾಜದಲ್ಲಿ ಪ್ರಮುಖ ಸ್ಥಾನ ಪಡೆದಿರುವಾಗ ಇನ್ನೆಲ್ಲಿಯ ಆ ಮೋಹನ್ ದಾಸ್ ಕರಮಚಂದ್ ಗಾಂಧಿ. ರಾಷ್ಟ್ರ ಮತ್ತು ರಾಜ್ಯದ ಯುವ ಪೀಳಿಗೆಗೆ ನರೇಂದ್ರ ಮೋದಿ, ರಾಹುಲ್ ಗಾಂಧಿ ಮತ್ತು ಡಿಕೆ ಶಿವಕುಮಾರ್ ಹೆಸರು ತಿಳಿದಿರುವಷ್ಟು ಗಾಂಧಿಯವರ ಹೆಸರು ತಿಳಿದಿರುವ ಅನುಮಾನವಿದೆ. ಮೋದಿ ಮತ್ತು ಸಿದ್ದರಾಮಯ್ಯನವರ ವಿಚಾರಗಳ ಬಗ್ಗೆ ಅರಿವಿರುವಷ್ಟು ಗಾಂಧಿಯ ಚಿಂತನೆಗಳ ಅರಿವು ಖಂಡಿತ ಇಲ್ಲ. ಒಂದು ವೇಳೆ ಹೇಳುವ ಪ್ರಯತ್ನ ಮಾಡಿದರೂ ಅದು ಅರ್ಥವೇ ಆಗದಷ್ಟು ಯುವ ಮನಸುಗಳು ಸೀಡ್ಲೆಸ್ ಆಗಿವೆ ಮತ್ತು ಗುಲಾಮಿ ಮನೋಭಾವವನ್ನು ಒಪ್ಪಿಕೊಂಡಾಗಿದೆ.

ಅದು ರಿಯಲ್ ಎಸ್ಟೇಟ್ ಇರಲಿ, ಹಾರ್ಡ್ವೇರ್ ಇರಲಿ, ಸಾಫ್ಟ್ವೇರ್ ಇರಲಿ ಹಣದ ಆಧಾರದ ಮೇಲೆ, ಅದರ ಆಗುಹೋಗುಗಳ ಸುತ್ತಲೇ ಇವರ ಮನಸ್ಸು ಮತ್ತು ಸಂಪೂರ್ಣ ಬದುಕು ಸುತ್ತುತ್ತಿರುವುದರಿಂದ ಗಾಂಧಿಯ ಆದರ್ಶಗಳ ಅವಶ್ಯಕತೆ ಅವರಿಗೆ ಇಲ್ಲ ಎನಿಸುತ್ತದೆ ಹಾಗೂ ಮೋಹನ್ ದಾಸ್ ಗಾಂಧಿಯನ್ನು ಮರೆಸುವ ಪ್ರಯತ್ನಗಳು ಸಹ ನಡೆಯುತ್ತಿವೆ. ಅವರನ್ನು ಖಳನಾಯಕನಾಗಿ ಚಿತ್ರಿಸುವ ಬರಹಗಳು, ಭಾಷಣಗಳು, ಉಪನ್ಯಾಸಗಳು ಹೆಚ್ಚು ಹೆಚ್ಚು ಪ್ರಾಮುಖ್ಯತೆ ಪಡೆಯುತ್ತಿರುವುದರಿಂದ ಗಾಂಧಿ ಸಾಮಾನ್ಯ ಗಾಂಧಿಯಾಗಿ ಗುರುತಿಸಿಕೊಳ್ಳುವ ಹಂತ ತಲುಪಿಯಾಗಿದೆ.

ಬದುಕಿನ ತೀವ್ರತೆಯನ್ನು ಅನುಭವಿಸಲಾಗದ ನಮ್ಮ ದೇಹ ಮನಸುಗಳು ನಮ್ಮ ಬದುಕಿಗೆ ಕೊಳ್ಳಿ ಇಡುವ ವ್ಯಕ್ತಿಗಳನ್ನೇ ಮಹಾತ್ಮ ಎಂದು ಗುರುತಿಸುವ ಹಂತಕ್ಕೆ ತಲುಪಿರುವುದು ವಿಷಾದನೀಯ. " ಗಾಂಧಿಯ ಉಪವಾಸದಿಂದ ಗ್ಯಾಸ್ಟಿಕ್ ಬಂತೆ ಹೊರತು ಸ್ವಾತಂತ್ರ್ಯ ಬರಲಿಲ್ಲ " ಇತ್ತೀಚೆಗೆ ಸಾಮಾಜಿಕ ಜಾಲತಾಣದಲ್ಲಿ ಈ ರೀತಿಯ ಒಂದು ಪೋಸ್ಟ್ ನೋಡಿದೆ. ಅದನ್ನು ಸಾಕಷ್ಟು ಜನ ಬೆಂಬಲಿಸಿದರು ಸಹ.......

ಎಲ್ಲಿಗೆ ಇಳಿಯಿತು ನೋಡಿ ಗಾಂಧಿಯ ಅವಹೇಳನ.....ಬೇಡ ಗಾಂಧಿ ಬೇಡ, ನೀನಿನ್ನು ಹೊರಡು ಗಾಂಧಿ ಬುದ್ದನಂತೆ ಬೇರೆ ದೇಶಗಳಲ್ಲಿ ಸಂಚರಿಸುತ್ತಾ, ಜಪಾನ್ ವಿಯೆಟ್ನಾಂ ಕೊರಿಯಾ ಭೂತಾನ್ ದಾಟಿ ಮತ್ತೆ ದಕ್ಷಿಣ ಆಫ್ರಿಕಾದತ್ತಾ......ನಿನಗಿನ್ನು ಇಲ್ಲಿ ಜಾಗವಿಲ್ಲ. ಭಾರತ ಬದಲಾಗುತ್ತಿದೆ......ದೇಶ ಹಾಳಾದರೂ ಬಲಪಂಥ ಉಳಿಯಬೇಕು,

ಜನ ಹಾಳಾದರು ಎಡಪಂಥ ಬೆಳೆಯಬೇಕು...ಮಾನವೀಯ ಪಂಥ ಯಾರಿಗೂ ಬೇಕಾಗಿಲ್ಲ....ಅವರನ್ನು ಇವರು ಇವರನ್ನು ಅವರು ಒಬ್ಬರಿಗೊಬ್ಬರು ದ್ವೇಷಿಸುತ್ತಾ ನಾವು ಜೀವಪರ ನಾವು ದೇಶಪರ ಎಂದು ಕಚ್ಚಾಡುತ್ತಾ ಜನ ಮತ್ತು ದೇಶ ಎರಡನ್ನೂ ವಿನಾಶದ ಅಂಚಿನಲ್ಲಿ ನಿಲ್ಲಿಸಿದ್ದಾರೆ.


ಗಾಂಧಿ ನೀನು ಎಡಪಂಥವೋ ಬಲಪಂಥವೋ......ಗಾಂಧಿ ನಿನ್ನ ನೈತಿಕತೆಯನ್ನು ಹಣ ಅಧಿಕಾರ ಪ್ರಚಾರ ನುಂಗಿ ಹಾಕಿದೆ. ಜನರ ಬುದ್ಧಿಶಕ್ತಿಗೆ ಮಂಕು ಕವಿದಿದೆ. ಯೋಚನಾ ಶಕ್ತಿ ಸಂಕುಚಿತಗೊಂಡಿದೆ. ಜಾತಿ ಧರ್ಮ ಪಂಥಗಳ ಅಮಲು ಆವರಿಸಿಕೊಂಡಿದೆ.

76 ವರ್ಷಗಳ ನಂತರ ಇದು ಸಹಜವೇ ಇರಬೇಕು..... ಯಾರಿಗೆ ಬೇಕಿದೆ ಗಾಂಧಿ ನಿನ್ನ ನೈತಿಕತೆ.

ನೋಡು ಒಮ್ಮೆ ಈಗ ಬರುತ್ತಿರುವ ಧಾರವಾಹಿಗಳನ್ನು ಅವರಿಗೆ ಅನೈತಿಕತೆಯೇ ನೈತಿಕವಾಗಿದೆ, ನೋಡು ಒಮ್ಮೆ ಶಾಲೆ ಆಸ್ಪತ್ರೆಗಳನ್ನು ಅವರಿಗೆ ಹಣವೇ ನೈತಿಕವಾಗಿದೆ, ನೋಡು ಒಮ್ಮೆ ಸಾಹಿತಿಗಳು ಸಮಾಜ ಸೇವಕರನ್ನು ಅವರಿಗೆ ಪ್ರಶಸ್ತಿಗಳೇ ನೈತಿಕವಾಗಿದೆ,ನೋಡು ಒಮ್ಮೆ ರಾಜಕಾರಣಿ ಅಧಿಕಾರಿಗಳನ್ನು ಅವರಿಗೆ ಲಂಚವೇ ನೈತಿಕವಾಗಿದೆ. ನೋಡು ಒಮ್ಮೆ ಆಧ್ಯಾತ್ಮಿಕ ಗುರುಗಳನ್ನು ಅವರಿಗೆ, ಆಡಂಬರದ ಪ್ರದರ್ಶನವೇ ನೈತಿಕವಾಗಿದೆ. ನೋಡು ಒಮ್ಮೆ ನಮ್ಮ ಯುವಕರನ್ನು ಅವರಿಗೆ ಮೋಜು ಮಸ್ತಿಯೇ ನೈತಿಕವಾಗಿದೆ.

ಬಹುತೇಕ ಎಲ್ಲರೂ ಹೇಳುತ್ತಾರೆ, ಈಗಿನ ಪರಿಸ್ಥಿತಿಯಲ್ಲಿ ಎಷ್ಟೇ ಗಾಂಧಿ ಬಂದರು ಪರಿಸ್ಥಿತಿ ಬದಲಾಗುವುದಿಲ್ಲ ಎಂದು. ಇಷ್ಟೇ ಗಾಂಧಿ ನಿನ್ನ ನೈತಿಕತೆ ನಿನ್ನ ಪ್ರಾಮಾಣಿಕತೆ ನಿನ್ನ ದೂರದೃಷ್ಟಿ ಈ ಜನರಿಗೆ ಅರ್ಥವಾಗಿರುವುದು. ಎಲ್ಲಿದ್ದಾರೆ ಈಗ ಆ ಸತ್ಯ ನಿಷ್ಠ ವ್ಯಕ್ತಿ,ಎಲ್ಲಿದ್ದಾರೆ ಈಗ ಆ ಪಾರದರ್ಶಕ ವ್ಯಕ್ತಿ,ಎಲ್ಲಿದ್ದಾರೆ ಈಗ ನಿಷ್ಕಲ್ಮಶ ಹೃದಯದ ವ್ಯಕ್ತಿ,ಎಲ್ಲಿದ್ದಾರೆ ಈಗ ಆ ದೂರದೃಷ್ಟಿಯ ವ್ಯಕ್ತಿ,ನನ್ನ ಬದುಕೇ ನನ್ನ ಸಂದೇಶ ಎಂದು ಸಾರುವ ಧೈರ್ಯ ಈಗ ಯಾರಿಗಿದೆ....

ಹೊರಟು ಹೋಗು ಗಾಂಧಿ ಈ ದೇಶ ಬಿಟ್ಟು. ಈ ದೇಶದಲ್ಲಿ ಸದ್ಯಕ್ಕೆ ನೀನಿರಲು ಅರ್ಹನಲ್ಲ. ಸರಳತೆಯ ವ್ಯಾಖ್ಯಾನವೇ ಬದಲಾಗಿದೆ,ಸತ್ಯದ ವ್ಯಾಖ್ಯಾನವೇ ಬದಲಾಗಿದೆ,ಅಹಿಂಸೆಯ ವ್ಯಾಖ್ಯಾನವೇ ಬದಲಾಗಿದೆ,ಹೋರಾಟ ಉಪವಾಸ ಚಳವಳಿಗಳ ವ್ಯಾಖ್ಯಾನವೇ ಬದಲಾಗಿದೆ.......ಎಲ್ಲವೂ ಹಣ ಕೇಂದ್ರಿತ,ಎಲ್ಲವೂ ಅಧಿಕಾರ ಕೇಂದ್ರಿತ,ಎಲ್ಲವೂ ಪ್ರಚಾರ ಕೇಂದ್ರಿತ,ಎಲ್ಲವೂ ಅಹಂಕಾರ ಕೇಂದ್ರಿತ.....ಇರಬಹುದು ಗಾಂಧಿ



ನೀನು ಸಹ ಪರಿಪೂರ್ಣ ಅಲ್ಲ, ಒಂದಷ್ಟು ಗೊಂದಲ ಮತ್ತೊಂದಿಷ್ಟು ತಪ್ಪು ನಿರ್ಧಾರಗಳು ಆಗಿರಬಹುದು. ಅದು ಮಾನವ ಸಹಜ ಗುಣ. ಆದರೆ ನಿನ್ನ ಪಾರದರ್ಶಕತೆ – ನಿನ್ನ ನೈತಿಕತೆಗೆ ನೀನೇ ಸಾಟಿ......

ಏನೇ ಆಗಲಿ ಮೋಹನ್ ದಾಸ್ ಕರಮಚಂದ್ ಗಾಂಧಿಯನ್ನು ಹಿನ್ನೆಲೆಗೆ ಸರಿಸಿದ ದೇಶ ಮೇಲ್ನೋಟಕ್ಕೆ ಅಭಿವೃದ್ಧಿ ಹೊಂದುತ್ತಿರುವಂತೆ ಕಂಡರೂ ಒಳಗೊಳಗೆ ತನಗರಿವಿಲ್ಲದಂತೆ ಕುಸಿಯುತ್ತಿರುತ್ತದೆ.......

ಒಂದು ದೇಶದ ನಿಜವಾದ ಆತ್ಮಶಕ್ತಿಯನ್ನೇ ಮರೆಮಾಚಿ

ಮತ್ತೇನೋ ಸ್ವಾರ್ಥದ ಪರಿಧಿಯೊಳಗೆ ದೇಶ ಕಟ್ಟುವ ಕನಸನ್ನು ಜನರಲ್ಲಿ ಬಿತ್ತಿ ದೇಶವನ್ನು ಆಂತರ್ಯದಲ್ಲಿ ಕುಸಿಯುವಂತೆ ಮಾಡುತ್ತಿರುವ ಶಕ್ತಿಗಳ ಬಗ್ಗೆ ಎಚ್ಚರಿಸುತ್ತಾ..........

ನಾಳಿನ ಮಹಾತ್ಮ ಗಾಂಧಿಯವರ ಹುಟ್ಟುಹಬ್ಬಕ್ಕೆ ಶುಭಾಶಯಗಳನ್ನು ಕೋರುತ್ತಾ.......

ಹಾಗೆಂದು ತುಂಬಾ ನಿರಾಶರಾಗಬೇಕಿಲ್ಲ. ಯುವಕರಿಗೆ ಒಂದೆರಡು ದಶಕಗಳಿಂದ ಅವರನ್ನು ಕಾಡುತ್ತಿರುವ ಈ ಹಣದ ಮಾನಸಿಕ ರೋಗ ಸುಖಲೋಲುಪತೆಯ ಆಸೆ ಆಕಾಂಕ್ಷಿಗಳು ಕೆಲವೇ ವರ್ಷಗಳಲ್ಲಿ ಭ್ರಮನಿರಸನ ಉಂಟುಮಾಡಿ ಸಮಾಜ ಮತ್ತೆ ಮೌಲ್ಯಗಳಿಗಾಗಿ ತುಡಿಯುವುದು ಬಹುತೇಕ ನಿಶ್ಚಿತ. ಇಂದಿನ ಎಲ್ಲಾ ವಿದ್ಯಮಾನಗಳನ್ನು ನೋಡುತ್ತಿದ್ದರೆ ಮನಸ್ಸಿನ ಪ್ರಕ್ಷುಬ್ಧತೆಯ ನಿಯಂತ್ರಣವೇ ದೊಡ್ಡ ಸವಾಲಾಗಿದೆ .ಎಲ್ಲರೂ ಅತೃಪ್ತ ಆತ್ಮದ ಭೂತಗಳಂತೆ ಓಡಾಡುತ್ತಿದ್ದಾರೆ. ವಸ್ತು ಸಂಸ್ಕೃತಿಯೇ ನಿಜವಾದ ಮಜಾ ಸಂಸ್ಕೃತಿ ಎಂಬುದಾಗಿ ಭಾವಿಸಿದ್ದಾರೆ. ಇಂತಹ ಸನ್ನಿವೇಶದಲ್ಲಿ......

ಗಾಂಧಿಗೊಂದು ವಿದಾಯ ಹೇಳುವ ಸಮಯ ಬಂದಿದೆಯೇ............

ನನ್ನ ಅರಿವಿಗೆ ಬಂದಂತೆ ಗಾಂಧಿಯನ್ನು ಇಷ್ಟಪಡುವವರ ಸಂಖ್ಯೆ ದಿನೇ ದಿನೇ ವೇಗವಾಗಿ ಕುಸಿಯುತ್ತಿರುವ ಅನುಭವವಾಗುತ್ತಿದೆ ಮತ್ತು ಅದಕ್ಕಿಂತ ಹೆಚ್ಚಾಗಿ ಗಾಂಧಿಯನ್ನು ವಿರೋಧಿಸುವವರ ಸಂಖ್ಯೆ ಇನ್ನೂ ಹೆಚ್ಚಾಗುತ್ತಿದೆ ಅಷ್ಟೇ ಅಲ್ಲ ಗಾಂಧಿಯನ್ನು ದ್ವೇಷಿಸುವವರ ಸಂಖ್ಯೆ ಮತ್ತೂ ಹೆಚ್ಚಾಗುತ್ತಿದೆ. ಇನ್ನೂ ಆಳಕ್ಕೆ ಇಳಿದು ನೋಡಿದಾಗ ಕೆಲವರು ಗಾಂಧಿಯನ್ನು ಸಿಕ್ಕಿದರೆ ಮತ್ತೊಮ್ಮೆ ಇರಿದು ಇರಿದು ಕೊಲ್ಲುವ ಮಾತನಾಡುತ್ತಾರೆ.

ಇಂತಹ ಗಾಂಧಿಯನ್ನು ಮಹಾತ್ಮ ಪಟ್ಟದಿಂದ ಕೆಳಗಿಳಿಸಲು ಇದು ಅತ್ಯಂತ ಸುಸಮಯ. ಈಗಾಗಲೇ ಗಾಂಧಿಯ ಪ್ರತಿಮೆಗಳು ಕಣ್ಮರೆಯಾಗುತ್ತಿವೆ. ಅವರ ಚಿಂತನೆಗಳು ನಾಶವಾಗುತ್ತಿವೆ. ಅದರ ವಿರುದ್ಧ ಚಿಂತನೆಗಳು ಮಾನ್ಯತೆ ಪಡೆಯುತ್ತಿವೆ.

ಒಂದು ಕಡೆ ಭಗವದ್ಗೀತೆಯ ಶ್ಲೋಕಗಳು, ಮತ್ತೊಂದು ಕಡೆ ವೇದ ಉಪನಿಷತ್ತು ಮನುಸ್ಮೃತಿಗಳ ಕಡೆಗೆ ಒಲವು, ಇನ್ನೊಂದು ಕಡೆ ಖುರಾನ್ ಪ್ರಚಾರ, ಮಗದೊಂದು ಕಡೆ ಬೈಬಲ್ ವಿಸ್ತರಣೆ ಹಾಗೆಯೇ ಬುದ್ದನ ಚಿಂತನೆಗಳು, ಚಾಣಕ್ಯನ ನೀತಿಗಳು, ಆಚಾರ್ಯ ತ್ರಯರ ಸಂದೇಶಗಳು, ಬಸವಣ್ಣನವರ ವಚನಗಳು, ವಿವೇಕಾನಂದರ ಉಪನ್ಯಾಸಗಳು, ಬಾಬಾ ಸಾಹೇಬರ ವಿಚಾರಗಳು ಮುನ್ನಲೆಗೆ ಬಂದು ಒಂದು ಸಂಘರ್ಷಮಯ ವಾತಾವರಣ ನಿರ್ಮಾಣವಾಗಿದೆ. ಇದರ ಜೊತೆಗೆ ಸುಭಾಷ್ ಚಂದ್ರ ಬೋಸ್, ಭಗತ್ ಸಿಂಗ್, ಸರ್ದಾರ್ ವಲ್ಲಭಭಾಯಿ ಪಟೇಲ್, ವೀರ ಸಾರ್ವರ್ಕರ್ ಅವರನ್ನು ಗಾಂಧಿಯ ವಿರುದ್ಧ ವಿಜೃಂಭಿಸುವ ಭಾಷಣಗಳು, ಪುಸ್ತಕಗಳು, ಉಪನ್ಯಾಸಗಳು ಸಹ ಹೆಚ್ಚಾಗಿದೆ.

ಇಂತಹ ಸಂದರ್ಭದಲ್ಲಿ ಗಾಂಧಿಯನ್ನು ಇಟ್ಟುಕೊಂಡು ಮಾಡುವುದಾದರೂ ಏನು. ಗಾಂಧಿಯೊಬ್ಬ ಬ್ರಿಟಿಷ್ ಏಜೆಂಟ್, ಗಾಂಧಿಯೊಬ್ಬ ನಪುಂಸಕ, ಗಾಂಧಿಯೊಬ್ಬ ಕಪಟಿ, ಗಾಂಧಿಯೊಬ್ಬ ರಣಹೇಡಿ, ಗಾಂಧಿಯೊಬ್ಬ ಹಿಂದುತ್ವದ ವಿರೋಧಿ ಎಂದು ಹಿಯಾಳಿಸಿ ಕೇಳಿಬರುತ್ತಿರುವ ಮಾತುಗಳ ನಡುವೆ ಗಾಂಧಿ ಸಮರ್ಥನೆಯ ವ್ಯರ್ಥ ಪ್ರಯತ್ನ ಬಿಟ್ಟು ಅವರಿಗೆ ಒಂದು ವಿದಾಯ ಹೇಳಿ ಬಿಡೋಣ.

ಗಾಂಧಿ ಬದುಕಿದ್ದ ಸಮಯದಲ್ಲಿ ಬಹುತೇಕ ಅನಕ್ಷರಸ್ಥರಿಂದಲೇ ದೇಶ ತುಂಬಿತ್ತು. ಜನರ ಬಳಿ ಹಣವಿರಲಿಲ್ಲ. ಯಾವುದೇ ಪ್ರಬಲ ಮಾಧ್ಯಮಗಳು ಜನಪ್ರಿಯವಾಗಿರಲಿಲ್ಲ. ಚುನಾವಣಾ ರಾಜಕೀಯ ಹೆಚ್ಚು ಪ್ರಚಲಿತದಲ್ಲಿರಲಿಲ್ಲ. ಅಂತಹ ಸಂದರ್ಭದಲ್ಲಿ ವ್ಯಕ್ತಿಯೊಬ್ಬ ಮಹಾತ್ಮನಾಗುತ್ತಾನೆ.

ಆದರೆ ಈಗ ಎಲ್ಲರೂ ಬುದ್ದಿವಂತರೇ, ಜ್ಞಾನಿಗಳೇ, ಮೇಧಾವಿಗಳೇ. ಎಲ್ಲರ ಬಳಿಯೂ ವಿಶ್ವದ ಸಂಪೂರ್ಣ ಮಾಹಿತಿ ನೀಡುವ ಮೊಬೈಲ್ ತಂತ್ರಜ್ಞಾನವಿದೆ. ಎಲ್ಲಕ್ಕಿಂತ ಹೆಚ್ಚಾಗಿ ಸಂವಿಧಾನ ಮತ್ತು ಅದು ನೀಡಿರುವ ಅಭಿವ್ಯಕ್ತಿ ಸ್ವಾತಂತ್ರ್ಯವಿದೆ. ಬಹುತೇಕರ ಬಳಿ ದುಡ್ಡು ಇದೆ. ಅದರಿಂದಾಗಿಯೇ ಅವರಿಗೆ ಗಾಂಧಿ ಒಬ್ಬ ಸವಕಲು ನಾಣ್ಯದಂತೆ ಕಾಣುತ್ತಾರೆ.

ತನ್ನ ಮಕ್ಕಳನ್ನೇ ಸರಿಯಾಗಿ ನಿರ್ವಹಿಸಲಿಲ್ಲ ಗಾಂಧಿ, ತನ್ನ ದೇಹವನ್ನೇ ಸರಿಯಾಗಿ ನಿರ್ವಹಿಸಲಿಲ್ಲ ಗಾಂಧಿ ಇನ್ನೂ ತನ್ನ ದೇಶವನ್ನು ನಿರ್ವಹಿಸಲು ಸಾಧ್ಯವೇ ಎಂದು ಬಹಳ ಜನ ಕೇಳುತ್ತಾರೆ.

ಒಬ್ಬ ಮಂತ್ರಿ " ಶಸ್ತ್ರ ಮತ್ತು ಶಾಸ್ತ್ರದ ಬಲದಿಂದ ಸ್ವಾತಂತ್ರ್ಯ ಲಭಿಸಿತೇ ಹೊರತು ಅಹಿಂಸೆಯಿಂದ ಅಲ್ಲ " ಎಂದು ನೇರವಾಗಿಯೇ ಗಾಂಧಿಯ ಕೊಡುಗೆಯನ್ನು ಅಲ್ಲಗಳೆದರು.

ಇನ್ನೊಬ್ಬ ಮಂತ್ರಿ " ನಾಥುರಾಂ ಘೋಡ್ಸೆ ನಿಜವಾದ ದೇಶಪ್ರೇಮಿ – ಗಾಂಧಿ ದೇಶ ದ್ರೋಹಿ " ಎಂದು ಬಹಿರಂಗವಾಗಿಯೇ ಹೇಳಿದರು.

ಸತ್ಯ ಅಹಿಂಸೆ ಸರಳತೆ ನೈತಿಕತೆ ಮಾನವೀಯ ಮೌಲ್ಯಗಳು ಸಂಪೂರ್ಣ ಕುಸಿತ ಕಂಡಿರುವಾಗ ಗಾಂಧಿಯನ್ನು ಮರೆಯುವುದೇ ಒಳಿತು. ಇಲ್ಲದಿದ್ದರೆ............

ಸಿಕ್ಕ ಸಿಕ್ಕ ವಿಷಯಗಳಿಗೆ ಇಡೀ ಭಾರತವನ್ನೇ ಬಂದ್ ಮಾಡಿ ಮನಸ್ಸೋ ಇಚ್ಛೆ ಗಲಭೆ ಮಾಡುವ ಮತ್ತು ಮಾಡಿಸುವ ಸ್ವಾತಂತ್ರ್ಯವೂ ನಮಗಿದೆ.......

ಕೆಲವು ಕೊಲೆ – ಅತ್ಯಾಚಾರ – ಭ್ರಷ್ಟಾಚಾರ – ವಂಚನೆ – ಕಳ್ಳತನವನ್ನು ಮಾಡಿಯೂ ಪೋಲೀಸರಿಂದಲೋ ತಪ್ಪಿದರೆ ನ್ಯಾಯಾಲಯದಿಂದಲೋ ಬಚಾವ್ ಆಗಿ ಬರುವ ಸ್ವಾತಂತ್ರ್ಯವೂ ಇದೆ.........

ದಾರಿಯಲ್ಲಿ ಓಡಾಡುವ ಹೆಣ್ಣುಮಕ್ಕಳನ್ನು ಅಸಹ್ಯವಾಗಿ ಚುಡಾಯಿಸಿ ಭಾರತ್ ಮಾತಾಕಿ ಜೈ ಎನ್ನುವ ಸ್ವಾತಂತ್ರ್ಯವೂ ನಮಗಿದೆ.........

ತಾವು ಹುಟ್ಟಿದ ಜಾತಿ ಹೇಳಿಕೊಂಡು ನಮಗೇಗೆಬೇಕೋ ಹಾಗೆ ಅದರ ಲಾಭ ಪಡೆಯುವ ಸ್ವಾತಂತ್ರ್ಯವೂ ನಮಗಿದೆ........

ಇದೆಲ್ಲದರ ನಡುವೆ ಬ್ರಿಟೀಷರ ಕಾಲದಲ್ಲಿ ಇದ್ದ ಆ ಗುಲಾಮಿ ಮನೋಭಾವ ಮಾತ್ರ ಬದಲಾಗಿಲ್ಲ.

ಸ್ವತಂತ್ರ ಚಿಂತನೆ – ಕ್ರಿಯಾತ್ಮಕ ಬೆಳವಣಿಗೆ – ಪ್ರಬುದ್ಧ ಮನಸ್ಥಿತಿ ಮಾತ್ರ ನಮಗೆ ದಕ್ಕಲಿಲ್ಲ. ಆಧುನಿಕ ಯುವಕರಂತೂ ಯಾವುದೋ ಸಿದ್ಧಾಂತಕ್ಕೋ, ಇಲ್ಲ ಯಥೇಚ್ಛ ಹಣಕ್ಕೋ ಅಥವಾ ತಂತ್ರಜ್ಞಾನಕ್ಕೋ ತಮ್ಮನ್ನು ಮಾರಿಕೊಳ್ಳುತ್ತಿದ್ದಾರೆ.

ಸಣ್ಣ ಸಣ್ಣ ಸಂಘ ಸಂಸ್ಥೆಗಳಲ್ಲಿ, ಫೇಸ್‌ಬುಕ್ ವಾಟ್ಸ್ ಆಪ್ ಗುಂಪುಗಳಲ್ಲಿಯೇ ಹಲವಾರು ವೈರುದ್ಯ ಚರ್ಚೆಗಳು, ಟೀಕೆಗಳು, ಅಸೂಯೆಗಳು, ಗಲಾಟೆಗಳು ನಡೆಯುತ್ತವೆ. ಸಹಕಾರ ಮತ್ತು ಹೊಂದಾಣಿಕೆ ಸಾಧ್ಯವಾಗುವುದಿಲ್ಲ. ಇನ್ನು ಇಡೀ ದೇಶವನ್ನು ಒಗ್ಗೂಡಿಸಿ ಪರಕೀಯರ ವಿರುದ್ಧ ಹೋರಾಡುವುದು ಸುಲಭವೇ ? ಯಾವ ನಿರ್ಧಾರ ತೆಗೆದುಕೊಂಡರು ಒಬ್ಬರಲ್ಲ ಒಬ್ಬರು ವಿರೋಧಿಸುತ್ತಲೇ ಇರುತ್ತಾರೆ.

ಜೊತೆಗೆ ಭಾರತೀಯ ಸಂಸ್ಕೃತಿಯ ಮೌಲ್ಯಗಳನ್ನು ಎತ್ತಿಹಿಡಿಯುವ ಜವಾಬ್ದಾರಿ ಸಹ ಇರುತ್ತದೆ. ಸತ್ಯವೋ ಮಿಥ್ಯವೋ, ನಂಬಿಕೆಯೋ, ಮೂಢ ನಂಬಿಕೆಯೋ ಜನರ ಭಾವನೆಗಳಿಗೆ ನೇರ ಘಾಸಿ ಮಾಡುವಂತಿಲ್ಲ. ಸೌಮ್ಯವಾಗಿ ಅದನ್ನು ತಿಳಿ ಹೇಳಬೇಕು.

ಒಂದು ಪ್ರಮುಖ ಕ್ರಿಕೆಟ್ ಮ್ಯಾಚಿನಲ್ಲಿ ಇರುವ ಉತ್ತಮ 11 ಜನರನ್ನು ಆಯ್ಕೆ ಮಾಡಿ ಆಡಲಾಗುತ್ತದೆ. ಫಲಿತಾಂಶ ಗೆದ್ದರೆ ನಮ್ಮ ನಿರ್ಧಾರ ಎಲ್ಲರೂ ಮೆಚ್ಚುತ್ತಾರೆ. ಸೋತರೆ ಅದೇ ಅಂಶಗಳನ್ನು ಟೀಕಿಸಲು ಉಪಯೋಗಿಸಿಕೊಳ್ಳುತ್ತಾರೆ.

ಸಾಮೂಹಿಕವಾಗಿ ಕ್ರಾಂತಿಕಾರಿಯಾಗಿ ಬ್ರಿಟಿಷರನ್ನು ಓಡಿಸುವುದು ಸಾಧ್ಯವಿರಲಿಲ್ಲ ಅಥವಾ ಸಂಪೂರ್ಣ ಸತ್ಯ, ಅಹಿಂಸೆಯ ಶರಣಾಗತಿ ಸಹ ಪ್ರಯೋಜನವಿರಲಿಲ್ಲ. ಇಡೀ ಒಕ್ಕೂಟವನ್ನು ಜಾಗೃತಗೊಳಿಸಿ ಯಾವುದೇ ಸಾವು ನೋವುಗಳಿಲ್ಲದೆ ಪರಕೀಯರನ್ನು ಭಾರತ ಬಿಟ್ಟು ತೊಲಗುವಂತೆ ಮಾಡುವುದು ಬಹುದೊಡ್ಡ ಸವಾಲಾಗಿತ್ತು.

ರಕ್ತ ಹರಿಸಿ ಹೋರಾಡಿದ್ದರೆ ಆಗುತ್ತಿದ್ದ ಅಪಾರ ಸಂಕಷ್ಟಗಳನ್ನು ಊಹಿಸಿದರೆ ಗೆಲುವಿಗಿಂತ ಯಥಾಸ್ಥಿತಿಯೇ ಉತ್ತಮ ಎಂದು ಖಂಡಿತ ಅನಿಸುತ್ತಿತ್ತು...

ಏನಾದರಾಗಲಿ,ನಾನು ಮಹಾತ್ಮನೋ, ಹುತಾತ್ಮನೋ ಎಂಬುದು ಮುಖ್ಯವಲ್ಲ.

ನನ್ನ ಎಲ್ಲಾ ಮೂರ್ತಿಗಳನ್ನು, ಸ್ಮಾರಕಗಳನ್ನು,ಹೆಸರುಗಳನ್ನು ನಾಶ ಮಾಡಿ ಚಿಂತೆಯಿಲ್ಲ. ಘೋಡ್ಸೆಯ ದೇವಸ್ಥಾನಗಳನ್ನು ಎಲ್ಲಾ ಕಡೆಯೂ ನಿರ್ಮಿಸಿ ಬೇಸರವಿಲ್ಲ.

ಆದರೆ ಭಾರತ ದೇಶ ಮಾತ್ರ ನಾಶವಾಗದಿರಲಿ. ಇಲ್ಲಿನ ಜನ ನೆಮ್ಮದಿಯಿಂದ ಇರಲಿ. ತಮ್ಮ ಒಳ ಜಗಳಗಳಿಂದ ಮತ್ತೊಮ್ಮೆ ಪರಕೀಯರ ದಾಳಿಗೆ ಒಳಗಾಗದಿರಲಿ ಎಂದು ಆಶಿಸುತ್ತಾ....

**ಪ್ರಬುದ್ಧ ಮನಸ್ಸು ಪ್ರಬುದ್ಧ ಸಮಾಜ,
ಜನರ ಜೀವನಮಟ್ಟ ಸುಧಾರಣೆಯ ಗುರಿಯೊಂದಿಗೆ,
ಮನಗಳಲ್ಲಿ – ಮನೆಗಳಲ್ಲಿ – ಮತಗಳಲ್ಲಿ – ಪರಿವರ್ತನೆಗಾಗಿ,
ಮನಸ್ಸುಗಳ ಅಂತರಂಗದ ಚಳವಳಿ,
ವಿವೇಕಾನಂದ. ಎಚ್. ಕೆ.**

Printed and Published by: SUNDAR and Owned by: SUNDAR Printed at: SHILPA PUBLICATIONS AND PRINTING PRESS, No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Published at: No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Editor: SUNDAR